ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೦	ಬೆಂಗಳೂರು, ಸೋಮವಾರ, ೦೮ ಸೆಪ್ಟೆಂಬರ್, ೨೦೨೫ (ಭಾದ್ರಪದ ೧೭, ಶಕವರ್ಷ ೧೯೪೭)	ಸಂಚಿಕೆ ೧೭೪
Volume 160	BENGALURU, MONDAY, 08 SEPTEMBER, 2025 (BHADRAPADA 17, SHAKAVARSHA 1947)	Issue 174

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ,

ಹೊಸಕೋಟೆ ಪೊಲೀಸ್ ಠಾಣೆಯ ಕ್ರೈಂ ನಂ.11/2019 ದಿನಾಂಕ: 14.01.2019
ಡಿ.ಎಫ್.ಓ.ಸಿ ಸಂಖ್ಯೆ: 14/2019

ಉಪಸ್ಥಿತರು: ಶ್ರೀ. ಸಂತೋಷ್‌ಕುಮಾರ್.ಜಿ., ಭಾ.ಅ.ಸೇ. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಪಿರ್ಯಾದಿ: ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಹೊಸಕೋಟೆ ಪೊಲೀಸ್ ಠಾಣೆ. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು ಅನುಪಸ್ಥಿತಿ)

ಎದುರುದಾರರು: ಕೆಎ-04-ಎಂಜಿ-0939 ಕಾರಿನ ಚಾಲಕ ಮೆ|| ಸತ್ಯಂ ಕಂಪ್ಯೂಟರ್ಸ್, ಪ್ರೈವೇಟ್ ಲಿಮಿಟೆಡ್, ನಂ:151/1, ಅಬೀಬ್ ಬಿಲ್ಡಿಂಗ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು-560001(ಅನುಪಸ್ಥಿತಿ)

* * * * * *

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ, 14.01.2019 ರಂದು ಬೆಳಿಗ್ಗೆ, ಸುಮಾರು 8.00 ಗಂಟೆ ಸಮಯದಲ್ಲಿ ಹೊಸಕೋಟೆ ಪೊಲೀಸ್ ಠಾಣೆಯ, ಪೊಲೀಸ್ ಉಪ ನಿರೀಕ್ಷಕರಿಗೆ ಬಂದ ಖಚಿತ ಮಾಹಿತಿಯ ಮೇರೆಗೆ ಹೊಸಕೋಟೆ ಕಡೆಯಿಂದ ಮಾಲೂರು ಕಡೆಗೆ KA-04-MG-0939 ರ ಕಾರಿನಲ್ಲಿ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೆ ರಕ್ತ ಚಂದನ ಮರದ ತುಂಡುಗಳನ್ನು ಸಾಗಿಸುತ್ತಿರುವ ಬಗ್ಗೆ, ಸದರಿ ವಾಹನವನ್ನು ಪತ್ತೆ ಹಚ್ಚುವ ಸಲುವಾಗಿ ಪಂಚಾಯ್ತಿದಾರರು ಹಾಗೂ ಪೊಲೀಸ್ ಸಿಬ್ಬಂದಿಗಳೊಂದಿಗೆ, ಹೊಸಕೋಟೆ-ಮಾಲೂರು ರಸ್ತೆ, ಜಡಿಗೇನಹಳ್ಳಿ ಸರ್ಕಾರಿ ಆಸ್ಪತ್ರೆ ನೇರದಲ್ಲಿ ಹೋಗುತ್ತಿದ್ದಾಗ, KA-04-MG-939 ಕಾರನ್ನು ರಸ್ತೆ ಪಕ್ಕದ ಮೋರಿಯಲ್ಲಿ ನಿಲ್ಲಿಸಿದ್ದು ಹತ್ತಿರ ಹೋಗಿ ಪರಿಶೀಲಿಸಲಾಗಿ ಕಾರಿನಲ್ಲಿ ಯಾರೂ ಇರಲಿಲ್ಲ. ಕಾರಿನ ಹಿಂಬದಿಯ ಸೀಟಿನ ಕೆಳಭಾಗದಲ್ಲಿ ರಕ್ತ ಚಂದನ ಮರಗಳನ್ನು ಲೋಡ್ ಮಾಡಿರುವುದು ಕಂಡು ಬಂದಿರುತ್ತದೆ. ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ವಾಹನವನ್ನು ಪರಿಶೀಲಿಸಲಾಗಿ ಸದರಿ ಕಾರು ಸಿಲ್ವರ್ ಬಣ್ಣದ್ದಾಗಿದ್ದು, ಹುಂಡೈ ಕಂಪನಿಯ ಏಸೆಂಟ್ ಕಾರ್ ಆಗಿರುತ್ತೆ. ಕಾರಿನ ಮುಂಭಾಗ ಮತ್ತು ಹಿಂಭಾಗ ಬಿಳಿ ಬಣ್ಣದ ನಂಬರ್ ಪ್ಲೇಟ್ ಮೇಲೆ KA-04-MG-0939 ನಂಬರ್ ಇರುತ್ತೆ. ಕಾರಿನ ಡೋರ್ ಅನ್ನು ತೆಗೆದು ಪರಿಶೀಲಿಸಲಾಗಿ 12 ರಕ್ತ ಚಂದನದ ಮರದ ತುಂಡುಗಳನ್ನು ಲೋಡ್ ಮಾಡಿದ್ದು ಪೊಲೀಸ್ ಸಿಬ್ಬಂದಿಗಳು ಸ್ಥಳಕ್ಕೆ ಸ್ಕೆಲ್ ಅನ್ನು ತರಿಸಿದ್ದು ತೂಕ ಮಾಡಿಸಲಾಗಿ 12 ರಕ್ತ ಚಂದನದ ತುಂಡುಗಳ ಒಟ್ಟು ತೂಕ 367 ಕೆ.ಜಿ. ತೂಕ ಇರುವುದು ಕಂಡುಬಂದಿರುತ್ತದೆ. ರಕ್ತಚಂದನ ಮರದ ತುಂಡುಗಳನ್ನು ಪರವಾನಗಿ / ರಹದಾರಿ ಪತ್ರ ಇಲ್ಲದೇ ಅಕ್ರಮವಾಗಿ ಸದರಿ ವಾಹನದಲ್ಲಿ ಸಾಗಾಣಿಕೆ

(೮೫೪೮)

ಮಾಡುತ್ತಿದ್ದ ಆರೋಪದ ಮೇಲೆ ಹೊಸಕೋಟೆ ಪೊಲೀಸ್ ಠಾಣೆಯಿಂದ ಮಾಲು ಸಮೇತ ವಾಹನವನ್ನು ಜಪ್ತು ಪಡಿಸಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 24(1), 62 ಮತ್ತು ಕರ್ನಾಟಕ ಅರಣ್ಯ ನಿಯಮ, 1969 ರ ಕಲಂ 144, 145 ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರಡಿ ದಿನಾಂಕ:14-01-2019 ರಂದು ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಹೊಸಕೋಟೆ ಪೊಲೀಸ್ ಠಾಣೆ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ KA-04-MG-0939 ಕಾರಿನ 'B' Extract ಅನ್ನು ಸಾರಿಗೆ ಅಧಿಕಾರಿಗಳಿಂದ ಪಡೆಯಲಾಗಿದ್ದು, ಸದರಿ ಕಾರು ಮೆ|| ಸತ್ಯಂ ಕಂಪ್ಯೂಟರ್ಸ್, ಪ್ರೈವೇಟ್, ಲಿಮಿಟೆಡ್ ನಂ:151/1, ಅಬೀಬ್ ಬಿಲ್ಡಿಂಗ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು- 560001 ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಜಪ್ತು ವಾಹನದ ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯಿದೆ 1963ರ ಕಲಂ 71(ಬಿ) ರಡಿ ಕಾರಣ ಕೇಳುವ ನೋಟೀಸನ್ನು ದಿನಾಂಕ: 28.11.2019, 11.12.2019, 22.08.2022, 03.09.2022, 21.10.2022, 16.02.2023 & 16.01.2024 ರಂದು ಮೇಲ್ಕಂಡ ವಿಳಾಸಕ್ಕೆ ಹೊರಡಿಸಿ ಈ ನ್ಯಾಯಾಲಯದಿಂದ ವಾಹನದ ಮಾಲೀಕರು/ ವಾರಸುದಾರರು/ ಸಂಸ್ಥೆ ಇವರುಗಳು ನ್ಯಾಯಾಲಯದ ಮುಂದೆ ಹಾಜರಾಗುವಂತೆ ನೋಟೀಸ್ ನೀಡಿದ್ದರೂ ಕೂಡ, ಈ ಬಗ್ಗೆ ವಾಹನದ ಮಾಲೀಕತ್ವದ ಬಗ್ಗೆ ಯಾವುದೇ ಸಂಸ್ಥೆ ಅಥವಾ ವ್ಯಕ್ತಿ ವಾಹನದ ಮಾಲೀಕತ್ವ ಕೋರಿ ಈ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ.

3. ನ್ಯಾಯಾಲಯದಲ್ಲಿ ಹೊಸಕೋಟೆ ಪೊಲೀಸ್ ಠಾಣಾ ತನಿಖಾಧಿಕಾರಿಗಳು, ಹಾಜರು ಪಡಿಸಿರುವ ದಾಖಲಾತಿಗಳನ್ನು ಹಾಗೂ ವರದಿಯನ್ನು ಪರಿಶೀಲಿಸಲಾಯಿತು. ವರದಿಗಳ ಪ್ರಕಾರ ಮೇಲ್ಕಂಡ ವಾಹನವು ಕೃತ್ಯದಲ್ಲಿ ಬಾಗಿಯಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟ ಕಾರಣ ಅಭಿಯೋಜನಾ ವಿಚಾರಣೆಗಾಗಿ ಸಾಕ್ಷಿದಾರರಿಗೆ ನೋಟೀಸ್ ನೀಡಲಾಯಿತು.

4. ಅಭಿಯೋಜನ ಪರ ಸಾಕ್ಷಿಗಳ ವಿಚಾರಣೆಗಾಗಿ ಶ್ರೀ. ಬಸವರಾಜು ಬಿನ್ ಜನಾರ್ಧನ್, ಶ್ರೀ. ನವೀನ್ ಕುಮಾರ್ ಬಿನ್ ಶಂಕರಪ್ಪ, ಶ್ರೀ. ರಾಜು ಸಿ.ಎಂ., ಆರಕ್ಷಕ ಉಪ ನಿರೀಕ್ಷಕರು, ಹೊಸಕೋಟೆ ಪೊಲೀಸ್ ಠಾಣೆ ರವರಿಗೆ ನೋಟೀಸ್ ನೀಡಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿದ್ದರೂ ಕೂಡ ಸದರಿಯವರ ಪೈಕಿ ಶ್ರೀ. ಬಸವರಾಜು ಬಿನ್ ಜನಾರ್ಧನ್‌ರವರು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ. ಉಳಿದ ಸಾಕ್ಷಿದಾರರಿಗೆ ಹಲವಾರು ಬಾರಿ ವಿಚಾರಣೆ ಹಾಜರಾಗುವಂತೆ ನೋಟೀಸ್ ನೀಡಿದ್ದರೂ ಕೂಡ ಸದರಿಯವರು ಗೈರುಹಾಜರಾದ ಕಾರಣ ಸದರಿಯವರ ವಿಚಾರಣೆಯನ್ನು ನಿಡುಗಡೆ ಮಾಡಲಾಗಿರುತ್ತದೆ. ವಾಹನದ ಮಾಲೀಕರಿಗೆ ಪುನಃ ನೋಟೀಸ್ ನೀಡಿದ್ದರೂ ಕೂಡ ಯಾವುದೇ ಪ್ರಯೋಜವಾಗುವುದಿಲ್ಲವೆಂದು ಮನಗಂಡು ಮುಂದಿನ ಕ್ರಮ ಕೈಗೊಳ್ಳಲಾಗಿರುತ್ತದೆ.

5. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

ಎ. ಹುಂಡೆ, ಕಂಪನಿಯ ಏಸೆಂಟ್ ಕಾರ್ ವಾಹನದ ನೋಂದಣಿ ಸಂಖ್ಯೆ: KA-04-MG-0939 ರಲ್ಲಿ ಒಟ್ಟು 367 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 12 ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?

ಬಿ. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಬಿ(1)ರ ಪ್ರಕಾರ ವಾಹನಗಳ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು / ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?

ಸಿ. ಪ್ರಕರಣದಲ್ಲಿ ಅಮಾನತ್ತುಪಡಿಸಿದ 367 ಕೆ.ಜಿ. ತೂಕವುಳ್ಳ ರಕ್ತ ಚಂದನದ 12 ತುಂಡುಗಳನ್ನು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನೆ ರುಜುವಾತು ಪಡಿಸಿದೆಯೇ ?

ಡಿ. ಅಮಾನತ್ತುಗೊಂಡ ವಾಹನ ಮತ್ತು ಅರಣ್ಯೋತ್ಪನ್ನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಇ. ಯಾವ ಆದೇಶ ಅಥವಾ ತೀರ್ಪು ?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ ಎ ಮತ್ತು ಬಿ : ಸಕಾರಾತ್ಮಕವಾಗಿದೆ.

ಅಂಶ ಸಿ ಮತ್ತು ಡಿ : ಸಕಾರಾತ್ಮಕವಾಗಿದೆ.

ಅಂಶ ಇ: ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

ಅಂಶ 'ಎ' ರಿಂದ 'ಡಿ' ವರೆಗೆ ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

6. ದಿನಾಂಕ, 14.01.2019 ರಂದು ಬೆಳಿಗ್ಗೆ 08:00 ಗಂಟೆ ಸಮಯದಲ್ಲಿ ಪಿರ್ಯಾದುದಾರರಿಗೆ ಹೊಸಕೋಟೆ ಕಡೆಯಿಂದ ಮಾಲೂರು ಕಡೆಗೆ KA-04-MG-0939 ಕಾರಿನಲ್ಲಿ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೆ ರಕ್ತ ಚಂದನದ ತುಂಡುಗಳನ್ನು ಕಳ್ಳತನದಿಂದ ಸಾಗಾಣಿಕೆ ಮಾಡುತ್ತಿರುವುದಾಗಿ ಬಂದ ಮಾಹಿತಿಯ ಮೇರೆಗೆ ರಾಜು ಸಿ.ಎಂ. ಪೊಲೀಸ್ ಉಪ ನಿರೀಕ್ಷಕರು, ಹೊಸಕೋಟೆ ಪೊಲೀಸ್ ಠಾಣೆ ರವರು ಪಂಚರಾದ ನವೀನ್ ಕುಮಾರ್ ಮತ್ತು ಬಸವರಾಜುರವರನ್ನು ಕರೆದುಕೊಂದು ಇತರೆ ಸಿಬ್ಬಂದಿಗಳೊಂದಿಗೆ ದಾಳಿ ನಡೆಸಿ ಕಾರು ಮತ್ತು ರಕ್ತ ಚಂದನವನ್ನು ಅಮಾನತ್ತು ಪಡಿಸಿಕೊಂಡಿರುವುದಾಗಿ ವರದಿ ನೀಡಿರುತ್ತಾರೆ.

6. ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಶ್ರೀ. ಬಸವರಾಜು ಬಿನ್ ಜನಾರ್ಧನ್ ರವರು ತಮ್ಮ ವಿಚಾರಣೆಯಲ್ಲಿ ದಿನಾಂಕ 14.01.2019 ರಂದು ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಜಡಿಗೇನಹಳ್ಳಿ ಗ್ರಾಮದ ಸರ್ಕಾರಿ ಆಸ್ಪತ್ರೆ ನೇರದಲ್ಲಿ ಹಾದು ಹೋಗುವ ಹೊಸಕೋಟೆ ಮಾಲೂರು ರಸ್ತೆಯಲ್ಲಿ ಪೊಲೀಸ್ ಸಿಬ್ಬಂದಿಗಳ ಜೊತೆ ತಾನು ಹೋಗುವ ಸಮಯದಲ್ಲಿ ಬಿಳಿ ಬಣ್ಣದ KA-04-MG-0939 ಕಾರನ್ನು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿದ್ದು, ಸದರಿ ಕಾರನ್ನು ಪೊಲೀಸರು ಪರಿಶೀಲಿಸಲಾಗಿ ಕಾರಿನ ಹಿಂಬದಿಯಲ್ಲಿ ರಕ್ತ ಚಂದನದ ತುಂಡುಗಳನ್ನು ಲೋಡ್ ಮಾಡಿರುವುದು ಕಂಡುಬಂದಿರುತ್ತದೆ. ಪೊಲೀಸ್ ಸಿಬ್ಬಂದಿಗಳು ಸದರಿ ರಕ್ತ ಚಂದನದ ತುಂಡುಗಳ ಅಳತೆ ಪಟ್ಟಿಯನ್ನು ತಯಾರಿಸಿದ್ದು, ರಕ್ತ ಚಂದನದ ತುಂಡುಗಳನ್ನು ಮತ್ತು ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಪಂಚಾಯ್ತಿ ದಾರನಾಗಿ ಸಹಿ ಮಾಡಿರುವುದು ಸತ್ಯವಾಗಿರುವುದಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಸಾಕ್ಷಿದಾರರ ಪಾಟಿ ಸವಾಲು ಮಾಡಲು ವಾಹನದ ಮಾಲೀಕರಾಗಲೀ ಅಥವಾ ಉತ್ತರಾಧಿಕಾರಿಗಳಾಗಲೀ, ಅವರ ಪರ ವಕೀಲರಾಗಲೀ ಹಾಜರಾಗಿರುವುದಿಲ್ಲ.

8. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆ ಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ, ಪೊಲೀಸ್ ಸಬ್ ಇನ್ಸ್ಪೆಕ್ಟರ್, ಹೊಸಕೋಟೆ ಪೊಲೀಸ್ ಠಾಣೆ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿಕೊಂಡಿರುವ ವರದಿಗೆ ಅನುಸಾರವಾಗಿ ನ್ಯಾಯಲಯದ ಮುಂದೆ ಹಾಜರಾಗಿ ನುಡಿದಿರುವ ಪಂಚನಾಮ ಸಾಕ್ಷೀದಾರರ ಸಾಕ್ಷ್ಯವನ್ನು ಪರಿಶೀಲಿಸಲಾಗಿ ಒಂದಕ್ಕೊಂದು ತಾಳೆಯಾಗಿರುವುದರಿಂದ ಪ್ರಕರಣದಲ್ಲಿನ ವಾಹನ ಮತ್ತು ರಕ್ತ ಚಂದನವನ್ನು ಅಮಾನತ್ತು ಪಡಿಸಿಕೊಂಡಿರುವುದು ದೃಢಪಟ್ಟಿರುತ್ತದೆ. ಹಾಗೂ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನದ ಚಾಲಕರೂ ಕೂಡ ನ್ಯಾಯಾಲಯಕ್ಕೆ ಹಾಜರಾಗಿ ತನ್ನ ಪರ ಅಹವಾಲನ್ನು ನೀಡಿರುವುದಿಲ್ಲ ಹಾಗೂ ಅಮಾನತ್ತು ಪಡಿಸಿಕೊಂಡಿರುವ ವಾಹನದಲ್ಲಿನ ರಕ್ತ ಚಂದನದ ತುಂಡುಗಳ ಸಾಗಾಣಿಕೆಯ ಬಗ್ಗೆ ಯಾವುದೇ ಅಹವಾಲನ್ನು ಹಾಗೂ ಪರವಾನಿಗೆಯ ಬಗ್ಗೆ ವಾಹನದ ಮಾಲೀಕರಿಂದಾಗಲೀ/ ಚಾಲಕರಿಂದಾಗಲೀ ಸಮರ್ಥನೆ ಇರುವುದಿಲ್ಲ.

9. ಮೇಲ್ಕಂಡ ಕಾರಣಗಳಿಂದಾಗಿ ಹಾಗೂ ಅಮಾನತ್ತು ಪಡಿಸಿಕೊಂಡಿರುವ. ಹುಂಡೈ, ಅಂಸೆಂಟ್ ವಾಹನದ ನೋಂದಣಿ ಸಂಖ್ಯೆ: KA-04-MG-0939 ರಲ್ಲಿ ಒಟ್ಟು 367 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 12 ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಿರುವುದು ದೃಢಪಟ್ಟಿರುತ್ತದೆ. ಮೇಲ್ಕಂಡ ದಿನಾಂಕಗಳಂತೆ ವಾಹನದ ಮಾಲೀಕರಿಗೆ ನೋಟೀಸ್ ನೀಡಿ ತಮ್ಮ ಅಹವಾಲನ್ನು ತೋಡಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡು ಅವರು ಗೈರುಹಾಜರಾದ ಕಾರಣ ಪುನಃ ನೋಟೀಸ್ ನೀಡುವುದು ಪ್ರಯೋಜನವಿಲ್ಲವೆಂದು ಪರಿಗಣಿಸಲಾಯಿತು.

10. ಹೊಸಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ KA-04-MG-0939 ನೊಂದಣಿಯ ವಾಹನದಲ್ಲಿ ದಿನಾಂಕ 14.01.2019 ರಂದು 12 ರಕ್ತ ಚಂದನದ ತುಂಡುಗಳಿದ್ದು, ಇವುಗಳ ಒಟ್ಟು ತೂಕ 367 ಕೆ.ಜಿ. ತೂಕ ಇದ್ದು, ಸದರಿ ರಕ್ತಚಂದನ ಮರದ ತುಂಡುಗಳನ್ನು ಪರವಾನಗಿ / ರಹದಾರಿ ಪತ್ರ ಇಲ್ಲದೇ ಅಕ್ರಮವಾಗಿ ಸದರಿ ವಾಹನದಲ್ಲಿ ಸಾಗಾಣಿಕೆ ಮಾಡುತ್ತಿದ್ದ ಆರೋಪದ ಮೇಲೆ ಹೊಸಕೋಟೆ ಪೊಲೀಸ್ ಠಾಣೆಯಿಂದ ಮಾಲು ಸಮೇತ ವಾಹನವನ್ನು ಜಪ್ತುಪಡಿಸಿ ಹೊಸಕೋಟೆ ಪೊಲೀಸ್ ಠಾಣೆಯ ಸಿಬ್ಬಂದಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 24(1), 62 ಮತ್ತು ಕರ್ನಾಟಕ ಅರಣ್ಯ ಅಧಿನಿಯಮ 1969ರ ನಿಯಮ 144, 145 ಜೊತೆಗೆ ಕಲಂ 379 ಭಾರತೀಯ ದಂಡ ಸಂಹಿತೆ 1860 ಉಲ್ಲಂಘನೆ ಮಾಡಿರುವುದಾಗಿ ಪ್ರಕರಣ ದಾಖಲಿಸಿಕೊಂಡಿದ್ದು, ಹೊಸಕೋಟೆ ಪೋಲೀಸ್ ಠಾಣೆಯವರು ದಾಖಲಿಸಿರುವ ಮೊಕದ್ದಮೆಯು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ)ರ ವ್ಯಾಪ್ತಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಸೂಕ್ತವಾಗಿರುತ್ತದೆ ಎಂದು ಪರಿಗಣಿಸಲಾಯಿತು.

11. ಸರ್ಕಾರದ ಪರ ತನಿಖಾಧಿಕಾರಿಗಳು ಹಾಜರು ಪಡಿಸಿರುವ ವರದಿಗಳು ಹಾಗೂ ವಿಚಾರಣೆ ಮಾಡಲಾದ ಪಂಚನಾಮ ಸಾಕ್ಷ್ಯವು ಒಂದಕ್ಕೊಂದು ಪೂರಕವಾಗಿದ್ದು, ಅಮಾನತ್ತು ಪಡಿಸಿಕೊಂಡ ಹುಂಡೈ, ಅಂಸೆಂಟ್ ವಾಹನ ನೊಂದಣಿ ಸಂಖ್ಯೆ: KA-04-MG-0939ರಲ್ಲಿ ಅಕ್ರಮವಾಗಿ ಒಟ್ಟು 367 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 12 ತುಂಡುಗಳನ್ನು ಸಾಗಣೆ ಮಾಡುತ್ತಿದ್ದ ಬಗ್ಗೆ, ರಕ್ತಚಂದನದ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗಿಲವೆಂದು ಅಲ್ಲಗಳೆಯಲು ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ

ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ ಹಾಗೂ ಪ್ರಕರಣವು ತುಂಬ ಹಳೆಯ ಪ್ರಕರಣವಾದ್ದರಿಂದ, ಅಮಾನತ್ತು ಪಡಿಸಿಕೊಂಡ ವಾಹನವು ಶಿಥಿಲವಾಗುವ ಕಾರಣದಿಂದಾಂಗಿ ಹಾಗೂ ಜಪ್ತಾದ ರಕ್ತಚಂದನವು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 'ಎ' ರಿಂದ 'ಡಿ' ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು, ಮೇಲ್ಕಂಡ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ಸಾಕ್ಷಿದಾರರ ಹೇಳಿಕೆ ಹಾಗೂ ವರದಿಗಳಿಂದಾಗಿ ಸಂಶಯಾತೀತವಾಗಿ ಸಾಭಿತಾಗಿರುತ್ತದೆ.

12. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ (1) ಮೇರೆಗೆ ರಾಜ್ಯ ಸರ್ಕಾರ ಸ್ವತ್ತಾದ ರಕ್ತಚಂದನ ಮರದ 12 ತುಂಡುಗಳನ್ನು ಹುಂಡೈ, ಅಂಸೆಂಟ್ ವಾಹನ ನೊಂದಣಿ ಸಂಖ್ಯೆ: KA-04-MG-0939ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969ರ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಕಾರಣಕ್ಕೆ ಹೊಸಕೋಟೆ ಪೋಲೀಸ್ ನವರು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ರೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು, ಹಾಜರುಪಡಿಸಿದ್ದು ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ರಕ್ತಚಂದನ ಮರದ ತುಂಡುಗಳು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಅಂಶ -ಇ ಈ ಕೆಳಕಂಡಂತೆ:

ಆದೇಶ

ನಾನು ಶ್ರೀ. ಸಂತೋಷ್‌ಕುಮಾರ್.ಜಿ., ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ, ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ಹೊಸಕೋಟೆ ಪೊಲೀಸ್ ಠಾಣೆ ಕ್ರೈಂ ನಂ: 11/2019) ರಲ್ಲಿ ಒಳಗೊಂಡಿರುವ ಹುಂಡೈ ಅಂಸೆಂಟ್ ವಾಹನ ನೊಂದಣಿ ಸಂಖ್ಯೆ: KA-04-MG-0939 ವಾಹನ ಹಾಗೂ ಒಟ್ಟು 367 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 12 ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ. ಈ ದಿನ ದಿನಾಂಕ:29-07-2025ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

'ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ

PR-1153

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಕ್ರೈಂ ನಂ.35/2019 ದಿನಾಂಕ: 14.03.2019
ಡಿ.ಎಫ್.ಓ.ಸಿ ಸಂಖ್ಯೆ: 15/2019

ಉಪಸ್ಥಿತರು: ಶ್ರೀ. ಸಂತೋಷ್ ಕುಮಾರ್. ಜಿ. ಭಾ.ಅ.ಸೇ. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಪಿರ್ಯಾದಿ: ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು)

ಎದುರುದಾರರು: 1) ಉಸ್ಮಾನ್ @ ಬಾಬು ಉಲ್ಲಾ ಬಿನ್ ಸನ್ನು, ಕಟ್ಟಿಗೇನಹಳ್ಳಿ ಗ್ರಾಮ, ಜಡಿಗೇನಹಳ್ಳಿ ಹೋಬಳಿ, ಹೊಸಕೋಟೆ ತಾ|| ಮತ್ತು ಇತರರು
2) Goutham S Dekum S/o Shivalingappa, #24, Kodigehalli Extn Main, Ganapathi Temple, RD Kadugodi Post, Bangalore (3) (ಅನುಪಸ್ಥಿತಿ)

* * * * * *

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ:14.03.2019 ರಂದು ಸಂಜೆ 06-45 ಗಂಟೆಗೆ ತಿರುಮಶೆಟ್ಟಿಹಳ್ಳಿ ಪೊಲೀಸ್ ಉಪ ನಿರೀಕ್ಷಕರಾದ ಶ್ರೀ ಪಾಲಾಕ್ಷ ಪ್ರಭು ಕೆ.ಎನ್. ರವರು ಹಾಜರುಪಡಿಸಿದ ವರದಿಯಲ್ಲಿ ಸದರಿ ದಿನದಂದು ಸಂಜೆ 04:00 ಗಂಟೆಯಲ್ಲಿ ಬಂದ ಬಾತ್ಮಿಯಂತೆ ಕಟ್ಟಿಗೇನಹಳ್ಳಿ ಗ್ರಾಮದ ಅಮೀರ್ ಉಲ್ಲಾ ಖಾನ್ ರವರ ಖಾಲಿ ಜಾಗದಲ್ಲಿ ಉಸ್ಮಾನ್ @ ಬಾಬು ಉಲ್ಲಾ, ಕಟ್ಟಿಗೇನಹಳ್ಳಿ ಗ್ರಾಮ ಮತ್ತು ಇತರರು ರಕ್ತ ಚಂದನದ ಮರದ ತುಂಡುಗಳನ್ನು ಅಕ್ರಮವಾಗಿ ಸಂಗ್ರಹ ಮಾಡಿಕೊಂಡಿದ್ದು ಬೇರೆ ಕಡೆಗೆ ಸಾಗಿಸಲು ಕಾರಿಗೆ ಜೋಡಿಸುತ್ತಿದ್ದರೆಂಬ ಮಾಹಿತಿ ಮೇರೆಗೆ ಇಲಾಖಾ ಮೇಲಾಧಿಕಾರಿಗಳ ಮಾರ್ಗದರ್ಶನ ಪಡೆದು ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ಪಂಚಾಯ್ತಿದಾರರುಗಳೊಂದಿಗೆ ಠಾಣಾ ಸರ್ಕಾರಿ ವಾಹನದಲ್ಲಿ ಕಟ್ಟಿಗೇನಹಳ್ಳಿ ಗ್ರಾಮದ ಮೇಲ್ಕಂಡ ಸ್ಥಳಕ್ಕೆ ಹೋಗುತ್ತಿದ್ದಂತೆ ಅದೇ ದಿನ ಸಂಜೆ 04 :00 ಗಂಟೆಗೆ ಸ್ಥಳದಲ್ಲಿ ಕಾರನ್ನು ನಿಲ್ಲಿಸಿಕೊಂಡು ರಕ್ತ ಚಂದನ ಮರದ ತುಂಡುಗಳನ್ನು ಜೋಡಿಸುತ್ತಿದ್ದ ಆಸಾಮಿಗಳು ಓಡಿ ಹೋಗಿದ್ದು ಆ ಪೈಕಿ ಒಬ್ಬ ನನ್ನು ಉಸ್ಮಾನ್ @ ಬಾಬು ಉಲ್ಲಾ ಬಿನ್ ಸನ್ನುಎಂದು ಗುರುತಿಸಿದ್ದು, ಸ್ಥಳದಲ್ಲಿದ್ದ ಕಾರನ್ನು ಪರಿಶೀಲಿಸಲಾಗಿ ಅದು ಕೆಂಪು ಬಣ್ಣದ ಫೋರ್ಡ್ ಐಕಾನ್ ಕಾರಾಗಿದ್ದು, ಕಾರಿನ ಮುಂಭಾಗ ಮತ್ತು ಹಿಂಭಾಗ KA-03-MA-3151 ಎಂಬ ನೊಂದಣಿ ಸಂಖ್ಯೆ ಇರುತ್ತದೆ. ಕಾರಿನ ಒಳಭಾಗದಲ್ಲಿ ಒಟ್ಟು 03 ರಕ್ತ ಚಂದನದ ತುಂಡುಗಳಿದ್ದು ಸದರಿ ಮರದ ತುಂಡುಗಳಿಗೆ ಕ್ರ.ಸಂ 01 ರಿಂದ 03 ರವರೆಗೆ ನಂಬರುಗಳನ್ನು ಕೊಟ್ಟು ಗುರುತು ಮಾಡಿದ್ದು ಸದರಿ ರಕ್ತ ಚಂದನ ಮರದ ತುಂಡುಗಳು ಒಟ್ಟು 66 ಕೆ.ಜಿ ಇದ್ದು ಇದರ ಅಂದಾಜು ಬೆಲೆ ಸುಮಾರು ರೂ. 99,000/- ಅಂದಾಜಿಸಿರುತ್ತಾರೆ. ಆರೋಪಿ ಉಸ್ಮಾನ್ @ ಬಾಬು ಉಲ್ಲಾ ಬಿನ್ ಸನ್ನು ಮತ್ತು ಇತರರು ರಕ್ತ ಚಂದನ ಮರದ ತುಂಡುಗಳನ್ನು ಎಲ್ಲಿಂದಲೋ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹ ಮಾಡಿದ್ದು, ಬೇರೆ ಕಡೆಗೆ ಕಳ್ಳತನದಿಂದ ಸಾಗಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ನಂತರ ಸದರಿ ತುಂಡುಗಳನ್ನು ಮತ್ತು ಕಾರನ್ನು ಅಮಾನತ್ತು ಪಡಿಸಿಕೊಂಡು ಉಸ್ಮಾನ್ @ಬಾಬು ಉಲ್ಲಾ ಸನ್ನು ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆ ಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ KA-03-MA-3151 ಕಾರಿನ 'B' Extract ಅನ್ನು ಸಾರಿಗೆ ಅಧಿಕಾರಿಗಳಿಂದ ಪಡೆಯಲಾಗಿದ್ದು, ಸದರಿ ಕಾರು Goutham S Dekum S/o Shivalingappa, #24, Kodigehalli Extn Main, Ganapathi Temple, RD Kadugodi Post, Bangalore ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಜಪ್ತು, ವಾಹನದ ಮಾಲೀಕರಿಗೆ ಕರ್ನಾಟಕ ಅರಣ್ಯ

ಕಾಯಿದೆ 1963ರ ಕಲಂ 71(ಬಿ) ರಡಿ ಕಾರಣ ಕೇಳುವ ನೋಟೀಸನ್ನು ದಿನಾಂಕ: 28.11.2019, 11.12.2019, 19.12.2019, 10.08.2022, 02.09.2022, 21.09.2022, 16.02.2023 & 16.01.2024 ರಂದು ಹೊರಡಿಸಲಾಯಿತು. ವಾಹನದ ಮಾಲೀಕರು/ ವಾರಸುದಾರರು/ ಸಂಸ್ಥೆ ಇವರುಗಳ ಗಮನಕ್ಕೆ ತರಲಾದ ನೋಟೀಸ್ ಬಗ್ಗೆ ವಾಹನದ ಮಾಲೀಕತ್ವದ ಬಗ್ಗೆ ಯಾವುದೇ ಸಂಸ್ಥೆ ಅಥವಾ ವ್ಯಕ್ತಿ ವಾಹನದ ಮಾಲೀಕರಾಗಲೀ ವಾಹನವು ತಮ್ಮದೆಂದು ಕೋರಿ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ.

3. ತನಿಖಾಧಿಕಾರಿಗಳು ಸಲ್ಲಿಸಿರುವ ದಾಖಲಾತಿಗಳನ್ನು ಹಾಗೂ ವರದಿಯನ್ನು ಪರಿಶೀಲಿಸಲಾಯಿತು. ಪ್ರಕರಣದ ವಸ್ತು ಸ್ಥಿತಿಯು ತನಿಖಾ ವರದಿಗೆ ಪೂರಕವಾದ ಕಾರಣ ಪ್ರಕರಣವನ್ನು ಸಾಭೀತು ಪಡಿಸಿಕೊಳ್ಳಲು, ವರದಿಯಲ್ಲಿ ನಮೂದಿಸಿರುವ ಸಾಕ್ಷಿದಾರರಾದ ಶ್ರೀ. ವೆಂಕಟೇಶ್ ಮತ್ತು ಶ್ರೀ. ಸಾಗರ್.ವಿ ಪಂಚಸಾಕ್ಷಿದಾರರು ಹಾಗೂ ತನಿಖಾಧಿಕಾರಿಗಳಾದ ಶ್ರೀ.ಮಹದೇವರೆಡ್ಡಿರವರುಗಳಿಗೆ ನೋಟೀಸ್ ನೀಡಲಾಯಿತು. ಪ್ರಕರಣದ ತನಿಖಾಧಿಕಾರಿಗಳಾದ ಶ್ರೀ. ಮಹದೇವರೆಡ್ಡಿ ರವರು ನ್ಯಾಯಾಲಯಕ್ಕೆ ಹಾಜರಾಗಿ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

4. 4. ಅಭಿಯೋಜನ ಪರ ಸಾಕ್ಷಿಗಳ ವಿಚಾರಣೆಗಾಗಿ ಜರುಗಿರುವ ನಡಾವಳಿಗಳ ದಿನಾಂಕಗಳಂದು ವಾಹನದ ಮಾಲೀಕರು, ಉತ್ತರಾಧಿಕಾರಿಗಳು ಮತ್ತು ಅವರ ಪರ ವಕೀಲರು ಹಾಜರಾಗಿ ಪ್ರಕರಣವನ್ನು ಮುಂದುವರಿಸಿಕೊಂಡು ಹೋಗಿರುವುದಿಲ್ಲ ಹಾಗೂ ಹಲವಾರು ಅವಕಾಶಗಳನ್ನು ನೀಡಿದರು ನ್ಯಾಯಾಲಯದ ಮುಂದೆ ಹಾಜರಾಗಿ ಅಭಿಯೋಜನೆ ಪರ ನುಡಿಸಲಾದ ಸಾಕ್ಷಿಗಳ ಪಾಟೀ ಸವಾಲು ಮಾಡಿರುವುದಿಲ್ಲ.

5. 5. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

1. ಫೋರ್ಡ್ ಕಂಪನಿಯ ಐಕಾನ್ ಕಾರ್ ವಾಹನದ ನೋಂದಣಿ ಸಂಖ್ಯೆ KA-03-MA-3151 ರಲ್ಲಿ ಒಟ್ಟು 66 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 03 ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಬಿ (1)ರ ಪ್ರಕಾರ ವಾಹನಗಳ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು / ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?
3. ಪ್ರಕರಣದಲ್ಲಿ ಅಮಾನತ್ತುಪಡಿಸಿದ 66 ಕೆ.ಜಿ ತೂಕವುಳ್ಳ ರಕ್ತಚಂದನದ 03 ತುಂಡುಗಳು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನೆ ರುಜುವಾತು ಪಡಿಸಿದೆಯೇ?
4. ಅಮಾನತ್ತುಗೊಂಡು ವಾಹನ ಮತ್ತು ಅರಣೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು ಹಾಕಿ ಳ್ಳಬಹುದೇ?
5. ಯಾವ ಆದೇಶ ಅಥವಾ ತೀರ್ಪು?
ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.
ಅಂಶ 01 ಮತ್ತು 02 : ಸಕಾರಾತ್ಮಕವಾಗಿದೆ.
ಅಂಶ 03 ಮತ್ತು 04 : ಸಕಾರಾತ್ಮಕವಾಗಿದೆ.
ಅಂಶ 05 : ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

ಅಂಶ 01 ರಿಂದ 04 ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

6. ದಿನಾಂಕ, 14.03.2019 ರಂದು ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ KA-03-MA-3151 ಕಾರಿನಲ್ಲಿ 03 ರಕ್ತ ಚಂದನದ ತುಂಡುಗಳಿದ್ದು ಇವುಗಳ ಒಟ್ಟು ತೂಕ 66 ಕೆ.ಜಿ. ಇರುವುದು ಕಂಡುಬಂದಿರುತ್ತದೆ. ರಕ್ತಚಂದನ ಮರದ ತುಂಡುಗಳನ್ನು ಪರವಾನಗಿ / ರಹದಾರಿ ಪತ್ರ ಇಲ್ಲದೇ

ಅಕ್ರಮವಾಗಿ ಸದರಿ ವಾಹನದಲ್ಲಿ ಸಾಗಾಣಿಕೆ ಮಾಡುತ್ತಿದ್ದ ಆರೋಪದ ಮೇಲೆ ಹೊಸಕೋಟೆ ಪೊಲೀಸ್ ಠಾಣೆಯಿಂದ ಮಾಲು ಸಮೇತ ವಾಹನವನ್ನು ಜಪ್ತು ಪಡಿಸಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪೊಲೀಸ್ ಸಬ್ ಇನ್ಸ್ ಪೆಕ್ಟರ್, ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

7. ಅಭಿಯೋಜನೆಯವರ ಪರ ಪ್ರಕರಣದ ಸಾಕ್ಷಿದಾರರಾದ ಶ್ರೀ. ಮಹದೇವ ರೆಡ್ಡಿ, ಸಹಾಯಕ ಪೊಲೀಸ್ ಇನ್ಸ್‌ಪೆಕ್ಟರ್, ಅನುಗೊಂಡನಹಳ್ಳಿ ಪೊಲೀಸ್ ಠಾಣೆ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ:14.03.2019 ರಂದು ತಾನು ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಹೆಡ್ ಕಾನ್‌ಸ್ಟೆಬಲ್ ಆಗಿದ್ದ ಸಂದರ್ಭದಲ್ಲಿ, ಕಟ್ಟೆಗೇನಹಳ್ಳಿ ಗ್ರಾಮದ ಅಮೀರ್ ಉಲ್ಲಾ ಖಾನ್ ರವರ ಖಾಲಿಜಾಗದಲ್ಲಿ ಉಸ್ಮಾನ್ @ ಬಾಬುಉಲ್ಲಾ, ಕಟ್ಟಿಗೇನಹಳ್ಳಿ ಗ್ರಾಮ ಮತ್ತು ಇತರರು. ರಕ್ತ ಚಂದನದ ಮರದ ತುಂಡುಗಳನ್ನು ಅಕ್ರಮವಾಗಿ ಸಂಗ್ರಹ ಮಾಡಿಕೊಂಡಿದ್ದು ಬೇರೆ ಕಡೆಗೆಸಾಗಿಸಲು ಕಾರಿಗೆ ಜೋಡಿಸುತ್ತಿದ್ದರೆಂಬ ಮಾಹಿತಿ ಮೇರೆಗೆ ಸದರಿ ಸ್ಥಳಕ್ಕೆ ಹೋಗುತ್ತಿದ್ದಂತೆ ಸ್ಥಳದಲ್ಲಿ ಕಾರನ್ನು ನಿಲ್ಲಿಸಿಕೊಂಡು ರಕ್ತ ಚಂದನ ಮರದ ತುಂಡುಗಳನ್ನು ಜೋಡಿಸುತ್ತಿದ್ದ ಆಸಾಮಿಗಳು ಓಡಿ ಹೋಗಿದ್ದು, ಸ್ಥಳದಲ್ಲಿದ್ದ ಕಾರನ್ನು ಪರಿಶೀಲಿಸಲಾಗಿ ಅದು ಕೆಂಪು ಬಣ್ಣದ ಫೋರ್ಡ್ ಐಕಾನ್ ಕಾರಾಗಿದ್ದು, KA-03-MA-3151 ಎಂಬ ನೊಂದಣಿ ಸಂಖ್ಯೆ ಇರುತ್ತದೆ. ಕಾರಿನ ಒಳಭಾಗದಲ್ಲಿ ಒಟ್ಟು 03 ರಕ್ತ ಚಂದನದ ತುಂಡುಗಳಿದ್ದು, ಸದರಿ ರಕ್ತ ಚಂನದ ಮರದ ತುಂಡುಗಳು ಒಟ್ಟು 66 ಕೆ.ಜಿ ಇರುತ್ತದೆ ಆರೋಪಿ ಉಸ್ಮಾನ್ ಬಾಬುಉಲ್ಲಾ ಬಿನ್ ಸನ್ನು ಮತ್ತು ಇತರರು ರಕ್ತ ಚಂದನ ಮರದ ತುಂಡುಗಳನ್ನು ಎಲ್ಲಿಂದಲೋ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಸಂಗ್ರಹ ಮಾಡಿದ್ದು, ಬೇರೆ ಕಡೆಗೆ ಕಳ್ಳತನದಿಂದ ಸಾಗಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ನಂತರ ಪೊಲೀಸ್ ಸಿಬ್ಬಂದಿಗಳು ರಕ್ತ ಚಂದನದ ತುಂಡುಗಳ ಅಳತೆ ಪಟ್ಟಿಯನ್ನು ತಯಾರಿಸಿದ್ದು ರಕ್ತ ಚಂದನದ ತುಂಡುಗಳನ್ನು ಮತ್ತು ವಾಹನವನ್ನು ಅಮಾನತ್ತು ಪಡಿಸಿಕೊಂಡು ಆರೋಪಿತರ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 24, 62, 80 ಮತ್ತು ಕರ್ನಾಟಕ ಅರಣ್ಯ ನಿಯಮ 144, 145 ರ ಜೊತೆಗೆ ಐಪಿಸಿ ಸೆಕ್ಷನ್ 379ರಡಿ ಪ್ರಕರಣ ಸಂಖ್ಯೆ:35/2019ನ್ನು ದಾಖಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ.

8. ಸಾಕ್ಷಿ ವಿಚಾರಣೆಯ ವೇಳೆ ವಾಹನದ ಮಾಲೀಕರು ಗೈರು ಹಾಜರಾಗಿದ್ದು, ಅಭಿಯೋಜನಪರ ನುಡಿಸಲಾದ ಸಾಕ್ಷಿಗಳನ್ನು ಪಾಟೀ ಸವಾಲು ಮಾಡಿರುವುದಿಲ್ಲ, ರಕ್ತಚಂದನದ 03 ತುಂಡುಗಳನ್ನು ಅಕ್ರಮವಾಗಿ ಕೆಂಪು ಬಣ್ಣದ ಫೋರ್ಡ್ ಐಕಾನ್ ವಾಹನ ನೋಂದಣಿ ಸಂಖ್ಯೆ:, KA-03-MA- 3151 ರಲ್ಲಿ ತುಂಬಿಕೊಂಡು ಕಳ್ಳಸಾಗಾಣಿಕೆ ಮಾಡಲು ಯತ್ನಿಸಿದ್ದು, ಸದರಿ ಅರಣೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸಲು ವಾಹನದ ಮಾಲೀಕ ಅಥವಾ ಅವರ ಪರ ವಕೀಲರು ಸಾಕ್ಷಿ ವಿಚಾರಣೆ ವೇಳೆ ಗೈರುಹಾಜರಾಗಿರುತ್ತಾರೆ.

9. ದಿನಾಂಕ, 14.03.2019 ರಂದು ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ, KA-03- MA-3151 ಕಾರಿನಲ್ಲಿ 03 ರಕ್ತ ಚಂದನದ ತುಂಡುಗಳಿದ್ದು, ಇವುಗಳ ಒಟ್ಟು ತೂಕ 66 ಕೆ.ಜಿ. ಇದ್ದು, ಸದರಿ ರಕ್ತಚಂದನ ಮರದ ತುಂಡುಗಳನ್ನು ಪರವಾನಗಿ / ರಹದಾರಿ ಪತ್ರ ಇಲ್ಲದೇ ಅಕ್ರಮವಾಗಿ ಸದರಿ ವಾಹನದಲ್ಲಿ ಸಾಗಾಣಿಕೆ ಮಾಡುತ್ತಿದ್ದ ಆರೋಪದ ಮೇಲೆ ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯಿಂದ ಮಾಲು ಸಮೇತ ವಾಹನವನ್ನು ಜಪ್ತು ಪಡಿಸಿ ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ

ಸಿಬ್ಬಂದಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 24, 62, 80 ಮತ್ತು ಕರ್ನಾಟಕ ಅರಣ್ಯ ಅಧಿನಿಯಮ 1969ರ ನಿಯಮ 144, 145 ಜೊತೆಗೆ ಕಲಂ 379 ಭಾ.ದಂ.ಸಂ 1860 ಉಲ್ಲಂಘನೆ ಮಾಡಿರುವುದು ತನಿಖಾ ವರದಿಯಿಂದ ಹಾಗೂ ವಿಚಾರಣೆ ಮಾಡಲಾದ ಸಾಕ್ಷ್ಯದಿಂದಾಗಿ ಆರೋಪವು ದೃಢಪಟ್ಟಿರುತ್ತದೆ.

10. ಸರ್ಕಾರದ ಪರ ಅಭಿಯೋಜನಾ ಸಾಕ್ಷಿದಾರರು ಫೋರ್ಡ್ ಐಕಾನ್ ವಾಹನ ನೊಂದಣಿ ಸಂಖ್ಯೆ KA-03-MA-3151 ರಲ್ಲಿ ಅಕ್ರಮವಾಗಿ ಒಟ್ಟು 66 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 03 ತುಂಡುಗಳನ್ನು ಸಾಗಣೆ ಮಾಡುತ್ತಿದ್ದ ಬಗ್ಗೆ ವಿಚಾರಣಾ ಸಮಯದಲ್ಲಿ ಹೇಳಿಕೆ ನೀಡಿರುತ್ತಾರೆ. ರಕ್ತಚಂದನದ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಿರುವ ಬಗ್ಗೆ, ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಹಾಗೂ ಸದರಿ ಪ್ರಕರಣವು 5 ವರ್ಷದ ಹಳೆಯ ಪ್ರಕರಣವಾಗಿದ್ದು, ವಾಹನವನ್ನು ನಿಂತ ಸ್ಥಿತಿಯಲ್ಲಿಯೇ ಬಿಟ್ಟಿದ್ದೇ ಆದಲ್ಲಿ ವಾಹನವು ಶಿಥಿಲಗೊಂಡು ತನ್ನ ಮೌಲ್ಯವನ್ನು ಕಳೆದುಕೊಳ್ಳುವುದಾಗಿ ಹಾಗೂ ಅರಣ್ಯೋತ್ಪನ್ನವಾದ ರಕ್ತಚಂದನವು ತಮ್ಮದೆಂದು ಸಾಭೀತಾಗದ ಕಾರಣ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ. ಆದುದರಿಂದ ಸದರಿ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ಸಾಕ್ಷಿದಾರರ ಹೇಳಿಕೆಯಿಂದ ಹಾಗೂ ದಾಖಲೆಗಳಿಂದ ಸಂಶಯಾತೀತವಾಗಿ ಸಾಭಿತಾಗಿರುತ್ತದೆ.

11. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ (1)ರ ಮೇರೆಗೆ ಅರಣ್ಯ ಉತ್ಪನ್ನವಾದ ರಕ್ತಚಂದನ ಮರದ 03 ತುಂಡುಗಳನ್ನು ಕೆಂಪು ಬಣ್ಣದ ಫೋರ್ಡ್ ಐಕಾನ್ ವಾಹನ ನೋಂದಣಿ ಸಂಖ್ಯೆ: KA-03-MA-3151 ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969ರ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಕಾರಣಕ್ಕೆ ತಿರುಮಲಶೆಟ್ಟಿಹಳ್ಳಿ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆ ಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು. ಹಾಜರುಪಡಿಸಿದ್ದು, ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ರಕ್ತಚಂದನ ಮರದ ತುಂಡುಗಳು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಅಂಶ- 5 ಈ ಕೆಳಕಂಡಂತೆ:

ಆದೇಶ

ನಾನು ಶ್ರೀ.ಸಂತೋಷ್ ಕುಮಾರ್.ಜಿ., ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ಕ್ರಂ ನಂ.35/2019) ರಲ್ಲಿ ಒಳಗೊಂಡಿರುವ ಕೆಂಪು ಬಣ್ಣದ ಫೋರ್ಡ್ ಐಕಾನ್ ವಾಹನ ನೊಂದಣಿ ಸಂಖ್ಯೆ: KA-03-MA-3151 ವಾಹನ ಹಾಗೂ ಒಟ್ಟು 66 ಕೆ.ಜಿ ತೂಕವುಳ್ಳ ರಕ್ತಚಂದನ ಮರದ 03 ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:29-07-2025ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ

PR-1154

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ,

ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಕ್ರೈಂ ನಂ.119/2019 ದಿನಾಂಕ: 08.10.2019
ಡಿ.ಎಫ್.ಓ.ಸಿ ಸಂಖ್ಯೆ: 16/2019

ಉಪಸ್ಥಿತರು: ಶ್ರೀ. ಸಂತೋಷ್ ಕುಮಾರ್.ಜಿ., ಭಾ.ಅ.ಸೇ. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಪಿರ್ಯಾದಿ: ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು) (ಅನುಪಸ್ಥಿತಿ)

ಎದುರುದಾರರು: 1)ಇನಾಯತ್ ಉಲ್ಲಾ @ ಇನಾಯತ್ ಬಿನ್ ಲೇಟ್ ಅಲೀಮ್ ಸಾಬ್ , ದೊಡ್ಡ ಮಸೀದಿ ಎದುರು, ಕಟ್ಟಿಗೇನಹಳ್ಳಿ ಗ್ರಾಮ (ಅನುಪಸ್ಥಿತಿ)
2) ರಿಯಾಜ್ ಬಿನ್ ಇಬ್ರಾಹಿಂ, ಕಟ್ಟಿಗೇನಹಳ್ಳಿ ಗ್ರಾಮ, ಕಟ್ಟಿಗೇನಹಳ್ಳಿ ಗ್ರಾಮ (ಅನುಪಸ್ಥಿತಿ)
3) Mr. Navaz.M S/o Hasanabba, #7-36, Zareeba Manzil Malali, Mangalore District (ಅನುಪಸ್ಥಿತಿ)
4) Mr. Mohammed isha shaik S/o Jahangir, #57, 3rd Cross Opp Lumbini garden, Veerannapalya, Bangalore North, Bangalore (ಅನುಪಸ್ಥಿತಿ)

* * * * *

ಪ್ರಕರಣದ ಮುಖ್ಯಾಂಶಗಳು:

1. ದಿನಾಂಕ 08.10.2019 ರಂದು ಸಂಜೆ 07-00 ಗಂಟೆಗೆ ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಗೆ ಫೋನ್ ಮುಖಾಂತರ ಕಟ್ಟಿಗೇನಹಳ್ಳಿ ಗ್ರಾಮದ ಐಓಸಿ ರಸ್ತೆಯ ಮುಖಾಂತರ ಇನ್ನೋವಾ ಕಾರಿನಲ್ಲಿ ಯಾರೋ ಆಸಾಮಿಗಳು ಶ್ರೀಗಂಧ ಮರದ ತುಂಡುಗಳನ್ನು ಅಕ್ರಮವಾಗಿ ತೆಗೆದುಕೊಂಡು ಬರುತ್ತಿದ್ದಾರೆಂದು ಬಾತ್ಮಿ ಬಂದಿರುತ್ತದೆ. ಈ ಬಗ್ಗೆ ಕಾರ್ಯಪ್ರೌವೃತ್ತರಾದ ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಗಳು, ಸರ್ಕಾರಿ ವಾಹನಗಳಲ್ಲಿ ಜಿನ್ನಾಗರ ಕ್ರಾಸ್‌ನಿಂದ ಬಾಬು ಫಾರಂ ಹತ್ತಿರ ಮರೆಯಲ್ಲಿ ನಿಂತು ಕಾಯುತ್ತಿದ್ದು, ಸಂಜೆ 07:45 ಗಂಟೆಗೆ ಐಓಸಿ ರಸ್ತೆಯಲ್ಲಿ ಜಿನ್ನಾಗರ ಕ್ರಾಸ್ ನಿಂದ ಹೊಸಕೋಟೆ ಕಡೆಗೆ ಒಂದು ಬಿಳಿ ಇನ್ನೋವಾ ಕಾರ್ ಬರುತ್ತಿದ್ದು ಕೂಡಲೇ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಕಾರನ್ನು ಅಡ್ಡಗಟ್ಟಿ ನಿಲ್ಲಿಸಿದ್ದು, ಕೂಡಲೇ ಕಾರಿನ ಚಾಲಕ ಮತ್ತು ಕಾರಿನಲ್ಲಿದ್ದ ಇನ್ನೊಬ್ಬ ಆಸಾಮಿ ಕಾರಿನಿಂದ ಇಳಿದು ಓಡಿ ಹೋಗಲು ಪ್ರಯತ್ನಿಸಿದ್ದು, ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು ಆಸಾಮಿಗಳನ್ನು ಹಿಡಿದುಕೊಂಡು ವಿಚಾರ ಮಾಡಲಾಗಿ 1) ಇನಾಯತ್ ಉಲ್ಲಾ ಇನಾಯತ್ ಬಿನ್ ಲೇಟ್ ಅಲೀಮ್ ಸಾಬ್, ದೊಡ್ಡ ಮಸೀದಿ ಎದುರು,

ಕಟ್ಟಿಗೇನಹಳ್ಳಿ ಗ್ರಾಮ 2) ರಿಯಾಜ್ ಬಿನ್ ಇಬ್ರಾಹಿಂ, ಕಟ್ಟಿಗೇನಹಳ್ಳಿ ಗ್ರಾಮ, ಕಟ್ಟಿಗೇನಹಳ್ಳಿ ಗ್ರಾಮ ಎಂದು ತಿಳಿದು ಬಂದಿರುತ್ತದೆ. ನಂತರ ಆಸಾಮಿಗಳನ್ನು ಕಾರಿನಲ್ಲಿ ಏನಿದೆ ಎಂದು ವಿಚಾರಮಾಡಲಾಗಿ ಗಾಬರಿಯಿಂದ ತಡವರಿಸುತ್ತಿದ್ದು, ಪುನಃ ವಿಚಾರ ಮಾಡಲಾಗಿ ಆಸಾಮಿಗಳು ಶ್ರೀಗಂಧ ಮರದ ತುಂಡುಗಳನ್ನು ಅಕ್ರಮವಾಗಿ ಕಳ್ಳತನದಿಂದ ಮಾರಾಟ ಮಾಡಲು ತೆಗೆದುಕೊಂಡು ಬಂದಿರುತ್ತೇವೆ ಎಂದು ತಿಳಿಸಿದ್ದು ನಂತರ ಆಸಾಮಿಗಳು ಬಂದಿದ್ದ KA-19-B-4670 ಇನ್ನೋವಾ ಕಾರ್ ಅನ್ನು ಪರಿಶೀಲಿಸಲಾಗಿ ಕೆಲವು ಪ್ಲಾಸ್ಟಿಕ್ ಚೀಲಗಳಲ್ಲಿ ಸಣ್ಣ ಸಣ್ಣ ಶ್ರೀಗಂಧ ಮರದ ತುಂಡುಗಳಿದ್ದು ಸದರಿ ಚೀಲಗಳನ್ನು S1, S2, S3, S4, S5 ಮತ್ತು S6 ಎಂದು ಗುರುತು ಮಾಡಿ ಪಂಚರ ಸಮಕ್ಷಮ ತೂಕ ಮಾಡಲಾಗಿ ಕ್ರಮವಾಗಿ 17.3, 17.2, 18.1, 16.4, 18.8 ಕೆ.ಜಿ. 22.7 ಕೆ.ಜಿ., ಹೀಗೆ ಒಟ್ಟು 110.5 ಕೆ.ಜಿ. ಶ್ರೀಗಂಧದ ಮರದ ತುಂಡುಗಳಿದ್ದು ಸದರಿ ಆಸಾಮಿಗಳು ಎಲ್ಲಿಂದಲೋ ಶ್ರೀಗಂಧ ಮರದ ತುಂಡುಗಳನ್ನು ಅಕ್ರಮವಾಗಿ ಮಾರಾಟ ಮಾಡಲು ತೆಗೆದುಕೊಂಡು ಬಂದಿರುವುದು ಕಂಡುಬಂದಿರುತ್ತದೆ. ನಂತರ ಸದರಿ ತುಂಡುಗಳನ್ನು ಮತ್ತು ಕಾರನ್ನು ಅಮಾನತ್ತುಪಡಿಸಿಕೊಂಡು ಇನಾಯತ್ ಉಲ್ಲಾ @ ಇನಾಯತ್ ಮತ್ತು ರಿಯಾಜ್ ಬಿನ್ ಇಬ್ರಾಹಿಂ ಇವರುಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆ ಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ KA-19-B-4670 ಕಾರಿನ 'B' Extract ಅನ್ನು ಸಾರಿಗೆ ಅಧಿಕಾರಿಗಳಿಂದ ಪಡೆಯಲಾಗಿದ್ದು, ಸದರಿ ಕಾರಿನ ಆರ್.ಟಿ.ಓ ದಾಖಲೆಗಳನುಸಾರ Mr. Navaz.M S/o Hasanabba, #7-36, Zareeba Manzil Malali, Mangalore District ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಅದರಂತೆ ಮೇಲ್ಕಂಡ ಹೆಸರು ಮತ್ತು ವಿಳಾಸಕ್ಕೆ ಕರ್ನಾಟಕ ಅರಣ್ಯ ಕಾಯೆ1963 ಕಲಂ 71(ಬಿ) ರಡಿಯಲ್ಲಿ ಕಾರಣ ಕೇಳುವ ನೋಟೀಸ್ ಅನ್ನು ದಿನಾಂಕ 10.01.2020, 23.01.2020, 30.01.2020 ರಂದು ನೀಡಲಾಗಿರುತ್ತದೆ. ಆದರೆ ವಾಹನದ ನೊಂದಾಯಿತ ಮಾಲೀಕರಾದ Mr. Navaz.M S/O Hasanabba ಇವರು ದಿನಾಂಕ:01.08.2022 ಮತ್ತು 20.08.2023 ರಂದು ಈ ಕಛೇರಿಗೆ ಪತ್ರ ಬರೆದು, ಸದರಿ KA-19-B- 4670 ವಾಹನವನ್ನು ನಾನು Mr. Mohammed isha shaik S/o Jahangir, #57, 3rd Cross Opp Lumbini garden, Veerannapalya, Bangalore North, Bangalore-560045 ರವರಿಗೆ ಮಾರಾಟ ಮಾಡಿದ್ದು, ತನಗೂ ಸದರಿ ವಾಹನಕ್ಕೂ ಯಾವುದೇ ಸಂಬಂಧ ಇರುವುದಿಲ್ಲವೆಂದು ಪತ್ರ ಸಲ್ಲಿಸಿರುತ್ತಾರೆ. ಅದರಂತೆ Mr. Mohammed isha shaik S/o Jahangir ಇವರಿಗೆ 22.07.2022, 10.08.2022, 02.09.2022, 02.01.2024 & 16.01.2024 ಗಳಂದು ನೋಟೀಸ್‌ಗಳನ್ನು ನೀಡಲಾಗಿರುತ್ತದೆ. ಆದರೆ ಸದರಿಯವರು ಯಾವುದೇ ದಿನಾಂಕಗಳಂದು ವಿಚಾರಣೆಗೆ ಹಾಜರಾಗಿರುವುದಿಲ್ಲ ಹಾಗೂ ಸದರಿಯವರಿಗೆ ನೀಡಿದ ನೋಟೀಸ್‌ಗಳು ಸದರಿ ವಿಳಾಸದಲ್ಲಿ ಸ್ವೀಕೃತವಾಗದೇ ವಾಪಸ್ಸು ಈ ಕಛೇರಿಗೆ ಬಂದಿರುತ್ತವೆ.

3. ಅಭಿಯೋಜನೆ ಪರ ಸಾಕ್ಷಿಗಳ ವಿಚಾರಣೆಗಾಗಿ ಜರುಗಿರುವ ನಡಾವಳಿಗಳ ದಿನಾಂಕಗಳಂದು ವಾಹನದ ಮಾಲೀಕರು, ಉತ್ತರಾಧಿಕಾರಿಗಳು ಮತ್ತು ಅವರ ಪರ ವಕೀಲರು ಹಾಜರಾಗಿ ಪ್ರಕರಣವನ್ನು ಮುಂದುವರಿಸಿಕೊಂಡು ಹೋಗಿರುವುದಿಲ್ಲ ಹಾಗೂ ಸದರಿಯವರಿಗೆ ಹಲವಾರು ಅವಕಾಶಗಳನ್ನು ನೀಡಿದ್ದರು ನ್ಯಾಯಾಲಯದ ಮುಂದೆ ಹಾಜರಾಗಿ ಅಭಿಯೋಜನೆ ಪರ ವಾದ ಮಂಡಿಸಿರುವುದಿಲ್ಲ

4. ಮೇಲ್ಕಂಡ ಆರೋಪವನ್ನು ರುಜುವಾತು ಪಡಿಸಲು ನ್ಯಾಯಾಲಯದಲ್ಲಿ ಅಭಿಯೋಜನ ಪರ ಶ್ರೀ.ರಾಜೇಶ್. ಕೆ. ಮತ್ತು ಶ್ರೀ. ಅಶೋಕ್.ವಿ.ಎಸ್. ಪಂಚಸಾಕ್ಷಿದಾರರಿಗೆ ಹಾಗೂ ರಾಕೇಶ್.ಸಿ. ತನಿಖಾಧಿಕಾರಿಗಳಿಗೆ ನೋಟೀಸ್ ನೀಡಿ ನ್ಯಾಯಾಲಯಕ್ಕೆ ಹಾಜರಾಗಿ ಪ್ರಕರಣವನ್ನ ಸಾಭೀತುಗೊಳಿಸಿಕೊಳ್ಳಲು ಅವಕಾಶ ನೀಡಿದ್ದರೂ ಕೂಡ ಸದರಿಯವರು ವಿಚಾರಣೆಗ ಹಾಜರಾಗದ ಕಾರಣ ಸದರಿಯವರನ್ನು ವಿಚಾರಣೆಯಿಂದ ಕೈಬಿಡಲಾಗಿರುತ್ತದೆ. ವಾಹನದ ಮಾಲೀಕರಿಗೆ ಹಲವಾರು ಬಾರಿ ನೋಟೀಸ್ ನೀಡಿ ತಮ್ಮ ಅಹವಾಲು ಹೇಳಿಕೊಳ್ಳಲು ಸಾಕಷ್ಟು ಅವಕಾಶ ನೀಡಿದ್ದರೂ ಕೂಡ ಸದರಿಯವರು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಸದರಿಯವರಿಗೆ ಪುನಃ

ನೋಟೀಸ್ ನೀಡಿದರೂ ಕೂಡ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಪ್ರಸಂಶಿಸಿ ಪ್ರಕರಣದ ಮುಂದಿನ ನಡವಳಿಯನ್ನು ಕೈಗೊಳ್ಳಲಾಗಿರುತ್ತದೆ.

5. ಈ ಕಾರಣದಿಂದಾಗಿ ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

ಎ. ಟೊಯೋಟೊ ಕಂಪನಿಯ ಇನ್ನೋವಾ ಕಾರ್ ವಾಹನದ ನೊಂದಣಿ ಸಂಖ್ಯೆ KA-19-B-4670 ರಲ್ಲಿ ಒಟ್ಟು 110.5 ಕೆ.ಜಿ. ಶ್ರೀಗಂಧದ ಮರದ ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?,

ಬಿ. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಬಿ (1)ರ ಪ್ರಕಾರ ವಾಹನಗಳ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು / ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?

ಸಿ. ಪ್ರಕರಣದಲ್ಲಿ ಅಮಾನತ್ತುಪಡಿಸಿದ 110.5 ಕೆ.ಜಿ. ಶ್ರೀಗಂಧದ ಮರದ ತುಂಡುಗಳನ್ನು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನೆ ರುಜುವಾತು ಪಡಿಸಿದೆಯೇ?

ಡಿ. ಅಮಾನತ್ತುಗೊಂಡು ವಾಹನ ಮತ್ತು ಅರಣ್ಯೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಇ. ಯಾವ ಆದೇಶ ಅಥವಾ ತೀರ್ಪು?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ ಎ ಮತ್ತು ಬಿ : ಸಕಾರಾತ್ಮಕವಾಗಿದೆ.

ಅಂಶ ಸಿ ಮತ್ತು ಡಿ : ಸಕಾರಾತ್ಮಕವಾಗಿದೆ.

ಅಂಶ ಇ: ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

ಅಂಶ 'ಎ' ರಿಂದ 'ಡಿ' ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

6. ದಿನಾಂಕ 08.10.2019 ರಂದು ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ KA-19-B- 4670 ಕಾರಿನಲ್ಲಿ 110.5 ಕೆ.ಜಿ. ಶ್ರೀಗಂಧ ಇರುವುದು ಕಂಡುಬಂದಿರುತ್ತದೆ. ಶ್ರೀಗಂಧ ಮರದ ತುಂಡುಗಳನ್ನು ಪರವಾನಗಿ / ರಹದಾರಿ ಪತ್ರ ಇಲ್ಲದೇ ಅಕ್ರಮವಾಗಿ ಸದರಿ ವಾಹನದಲ್ಲಿ ಸಾಗಾಣಿಕೆ ಮಾಡುತ್ತಿದ್ದ ಆರೋಪದ ಮೇಲೆ ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆಯಿಂದ ಮಾಲು ಸಮೇತ ವಾಹನವನ್ನು ಜಪ್ತಿ ಪಡಿಸಿ. ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆ ಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

7. ಪ್ರಕರಣದಲ್ಲಿ ಲಗತ್ತಿಸಿರುವ ದಾಖಲಾತಿಗಳನ್ನು ಹಾಗೂ ತನಿಖಾ ವರದಿಯನ್ನು ಪರಿಶೀಲಿಸಲಾಗಿ ಮೇಲ್ಕಂಡ ವಾಹನವು ಅಪರಾಧದಲ್ಲಿ ಬಾಗಿಯಾಗಿರುವುದು ಕಂಡುಬಂದ ಹಿನ್ನೆಲೆಯಲ್ಲಿ ತನಿಖಾ ವರದಿಯಲ್ಲಿ ನಮೂದಿಸಿರುವ ವ್ಯಕ್ತಿಗಳ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 86, 87 ಮತ್ತು ಭಾರತೀಯ ಮೋಟಾರು ವಾಹನ ಕಾಯ್ದೆ 1988 ಕಲಂ:192(ಎ) ಜೊತೆಗೆ ಕಲಂ 379 ಭಾ.ದಂ.ಸಂ 1860 ಉಲ್ಲಂಘನೆ ಮಾಡಿರುವುದಾಗಿ ಪ್ರಕರಣ ದಾಖಲಿಸಿಕೊಂಡಿದ್ದು, ತಿರುಮಶೆಟ್ಟಿಹಳ್ಳಿ ಪೋಲೀಸ್ ಠಾಣೆಯವರು ದಾಖಲಿಸಿರುವ ಮೊಕದ್ದಮೆಯು ಅರಣ್ಯ ಕಾಯ್ದೆ ವ್ಯಾಪ್ತಿಯಲ್ಲಿ ಸರಿ ಇರುತ್ತದೆಂದು ಈಗಾಗಲೇ ತನಿಖಾಧಿಕಾರಿಗಳು ನೀಡಿರುವ ದಾಖಲಾತಿಗಳಿಂದ ಹಾಗೂ ತನಿಖಾ ವರದಿಯಿಂದ ಮೇಲ್ಕಂಡ ಅಪರಾಧಗಳು ದೃಢಪಟ್ಟಿರುತ್ತವೆ.

8. ಟೊಯೊಟೋ ಇನ್ನೋವಾ ನೊಂದಣಿ ಸಂಖ್ಯೆ KA-19-B- 4670 ವಾಹನವು ನ್ಯಾಯಾಲಯದ ಮುಂದೆ ಸುಮಾರು 05 ವರ್ಷಗಳ ಕಾಲ ನಿಲುಗಡೆಯಾಗಿರುವುದು ಅದರ ಶಿಥಿಲತೆಗೆ ಕಾರಣವಾಗಿ ವಾಹನದ ಸಂಪೂರ್ಣ ಮೌಲ್ಯವು ಇಳಿಕೆಯಾಗುವ ಸಾಧ್ಯತೆ ಇರುವ ಕಾರಣ ಹಾಗೂ ವಾಹನದ ಮಾಲೀಕರು ದಿನಾಂಕ:01.08.2022 ಹಾಗೂ 20.08.2022ರಂದು ನೀಡಿರುವ ಪತ್ರದ ವಿಷಯದಂತೆ

ಮಾಲೀಕರು ಈಗಾಗಲೇ ತಾವು ಸದರಿ ವಾಹನವನ್ನು Mr. Mohammed isha shaik S/o Jahangir, #57, 3rd Cross Opp Lumbini garden, Veerannapalya, Bangalore North, Bangalore-560045 ರವರಿಗೆ ಮಾರಾಟ ಮಾಡಿರುವುದಾಗಿ ಹಾಗೂ ತನಗೂ ಮತ್ತು ವಾಹನಕ್ಕೂ ಯಾವುದೇ ಹಕ್ಕು ಇರುವುದಿಲ್ಲ, ಅಕ್ರಮ ಸಾಗಾಣಿಕೆಗೂ ತನಗೂ ಯಾವುದೇ ಸಂಬಂಧವಿರುವುದಿಲ್ಲವೆಂಬ ಪತ್ರದಲ್ಲಿನ ಅಂಶವನ್ನು ಪರಿಗಣಿಸಲಾಯಿತು. ಅಲ್ಲದೇ Mr. Mohammed isha shaik S/o Jahangir, #57, 3rd Cross Opp Lumbini garden, Veerannapalya, Bangalore North, Bangalore-560045 ರವರಿಗೆ ನೀಡಿದ ನೋಟೀಸ್‌ಗಳು ಕೂಡ ವಾಪಾಸಾಗಿದ್ದು, ಸದರಿಯವರೂ ಸಹ ಈ ವರೆಗೂ ನ್ಯಾಯಾಲಯಕ್ಕೆ ಹಾಜರಾಗದೇ ತಮ್ಮ ಅಹವಾಲನ್ನು ಕೋರಿಕೊಳ್ಳದೇ ಇರುವುದನ್ನು ಪರಿಗಣಿಸಲಾಯಿತು. ಪುನಃ ವಾಹನದ ಮಾಲೀಕರೆಂದು ಮೇಲ್ಕಂಡ ವ್ಯಕ್ತಿಗಳಿಗೆ ನೋಟೀಸ್ ನೀಡಿದ್ದೇ ಆದಲ್ಲಿ ಯಾವುದೇ ಪ್ರಯೋಜನವಾಗದೇ ಪ್ರಕರಣವು ವೃಥಾ ಮುಂದುವರೆಯುವಂತಾಗುತ್ತದೆಂದು ಭಾವಿಸಲಾಯಿತು. ಪ್ರಕರಣದಲ್ಲಿನ ಅರ್ಜಿದಾರರಿಗಾಗಲೀ ವಾಹನದ ಮಾಲೀಕರಾಗಲೀ ತಮ್ಮ ವಾಹನವನ್ನು ತಮ್ಮದೆಂದು ಹಾಗೂ ಮೇಲ್ಕಂಡ ಅಪರಾಧದಂತೆ ವಾಹನವು ಬಾಗಿಯಾಗಿಲ್ಲವೆಂದು ತಮ್ಮ ಪರ ಸಾಭೀತುಗೊಳಿಸಿಕೊಳ್ಳುವಂತಹ ಯಾವುದೇ ಅಹವಾಲನ್ನು ಮಾಡಲು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಇನ್ನು ಹೆಚ್ಚಿನ ಸಮಯ ಕಾಯುವುದು ಸೂಕ್ತವಲ್ಲವೆಂದು ಪರಿಗಣಿಸಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಟೊಯೊಟೋ ಇನ್ನೋವಾ ನೊಂದಣಿ ಸಂಖ್ಯೆ KA-19-B- 4670 ಮತ್ತು ಶ್ರೀಗಂಧವನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ)ರ ವ್ಯಾಪ್ತಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಸೂಕ್ತವಾಗಿರುತ್ತದೆ ಎಂದು ಪರಿಗಣಿಸಲಾಯಿತು.

09. ಸರ್ಕಾರದ ಪರ ತನಿಖಾಧಿಕಾರಿಗಳು ಹಾಜರು ಪಡಿಸಿರುವ ವರದಿಗಳ ಆಧಾರದ ಮೇಲೆ, ಅಮಾನತ್ತು ಪಡಿಸಿಕೊಂಡ ಟೊಯೊಟೋ ಇನ್ನೋವಾ ನೊಂದಣಿ ಸಂಖ್ಯೆ KA-19-B- 4670ರಲ್ಲಿ ಅಕ್ರಮವಾಗಿ ಒಟ್ಟು 110.5 ಕೆ.ಜಿ ತೂಕವುಳ್ಳ ಶ್ರೀಗಂಧವನ್ನು ಸಾಗಣೆ ಮಾಡುತ್ತಿದ್ದ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗಿಲವೆಂದು ಅಲ್ಲಗಳೆಯಲು ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ ಹಾಗೂ ಪ್ರಕರಣವು ತುಂಬ ಹಳೆಯ ಪ್ರಕರಣವಾದ್ದರಿಂದ, ಅಮಾನತ್ತು ಪಡಿಸಿಕೊಂಡ ವಾಹನವು ಶಿಥಿಲವಾಗಿ ವಾಹನದ ಮೌಲ್ಯವನ್ನು ಕಳೆದುಕೊಳ್ಳುವ ಕಾರಣದಿಂದಾಂಗಿ ಹಾಗೂ ಜಪ್ತಾದ ಶ್ರೀಗಂಧವು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 'ಎ' ರಿಂದ 'ಡಿ' ವರೆಗಿನ ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು, ಮೇಲ್ಕಂಡ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಗಳಿಂದಾಗಿ ಸಂಶಯಾತೀತವಾಗಿ ಸಾಭಿತಾಗಿರುತ್ತದೆ.

10. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ (1) ಮೇರೆಗೆ ರಾಜ್ಯ ಸರ್ಕಾರ ಸ್ವತ್ತಾದ 110.5 ಕೆ.ಜಿ. ತೂಕವುಳ್ಳ ಶ್ರೀಗಂಧವನ್ನು ಟೊಯೋಟಾ ಇನ್ನೋವಾ ವಾಹನ ನೊಂದಣಿ ಸಂಖ್ಯೆ: KA-19-B-4670 ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 86, 87 ಮತ್ತು ಭಾರತೀಯ ಮೋಟಾರು ವಾಹನ ಕಾಯ್ದೆ 1988 ಕಲಂ:192(ಎ) ಜೊತೆಗೆ ಕಲಂ 379 ಭಾ.ದಂ.ಸಂ 1860 ಉಲ್ಲಂಘನೆ ಮಾಡಿರುವ ಕಾರಣಕ್ಕೆ ತಿರುಮಲಶೆಟ್ಟಿಹಳ್ಳಿ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು. ಹಾಜರುಪಡಿಸಿದ್ದು, ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ಶ್ರೀಗಂಧ ಮರದ ತುಂಡುಗಳನ್ನು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಅಂಶ- ಇ ಈ ಕೆಳಕಂಡಂತೆ:

ಆದೇಶ

ಆದೇಶ ನಾನು ಶ್ರೀ. ಸಂತೋಷ್ ಕುಮಾರ್.ಜಿ., ಭಾ.ಅ.ಸೇ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಿರುಮಲಶೆಟ್ಟಿಹಳ್ಳಿ ಪೊಲೀಸ್ ಠಾಣೆ ಕ್ರೈಂ ನಂ.119/2019 ರಲ್ಲಿ ಒಳಗೊಂಡಿರುವ ಟೊಯೋಟಾ ಇನ್ನೋವಾ ವಾಹನ ನೊಂದಣಿ ಸಂಖ್ಯೆ: KA-19-B-4670 ವಾಹನ ಹಾಗೂ ಒಟ್ಟು 110.5 ಕೆ.ಜಿ ತೂಕವುಳ್ಳ ಶ್ರೀಗಂಧ ಮರದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉತ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:29-07-2025ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

ಈ ಆದೇಶವು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ

PR-1155

ಕರ್ನಾಟಕ ಸರ್ಕಾರ

ಸಂಖ್ಯೆ: ಎಫ್‌ಇಇ 23 ಎಫ್‌ಇಜಿ 2025

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 13-08-2025

ಸೇರ್ಪಡೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 23 ಎಫ್‌ಇಜಿ 2025, ದಿನಾಂಕ: 25-03-2025 ರಲ್ಲಿ ಶ್ರೀ ಬಸವರಾಜ ಎಸ್. ಡಾಂಗೆ ಇವರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ಜೇಷ್ಠತೆಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 179 ಎಫ್‌ಇಜಿ 2022, ದಿನಾಂಕ: 25-07-2024 ರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಶ್ರೀ ಮೊಹಮ್ಮದ್ ಅಸಾದ್ (ಹೈ.ಕ) (ಜೇ.ಕ್ರ.ಸಂ. 202) ಮತ್ತು ಶ್ರೀ ಚಂದ್ರಶೇಖರ್ ಎಸ್ ಹೇಮಾ (ಹೈ.ಕ) (ಜೇ.ಕ್ರ.ಸಂ.203) ಇವರ ಮಧ್ಯೆ 202 A ಎಂದು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 22 ಎಫ್‌ಇಜಿ 2025, ದಿನಾಂಕ: 25-02-2025 ರಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವ ಬಗ್ಗೆ ಪರಿಶೀಲನೆಯಲ್ಲಿದೆ.

ಆದ್ದರಿಂದ ಶ್ರೀ ಬಸವರಾಜ ಎಸ್. ಡಾಂಗೆ ಇವರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ಜೇಷ್ಠತೆಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 22 ಎಫ್‌ಇಜಿ 2025, ದಿನಾಂಕ: 25-02-2025 ರಲ್ಲಿನ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಈ ಕೆಳಕಂಡಂತೆ ಸೇರ್ಪಡೆಗೊಳಿಸಿ ಆದೇಶಿಸಲಾಗಿದೆ.

ಕ್ರ. ಸಂ.	ಹಳೆಯ ಜ್ಯೇಷ್ಠತಾ ಕ್ರ.ಸಂ.	ಹೆಸರು (ಶ್ರೀ/ಶ್ರೀಮತಿ)	ನೇಮಕಾತಿಯ ವಿಧಾನ (ನೇರ ನೇಮಕಾತಿ/ಮುಂಬಡ್ತಿ)	ಮೀಸಲಾತಿ ವರ್ಗ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ/ನೇರ ನೇಮಕಾತಿ ನೇಮಕಾತಿ ಹೊಂದಿದ ದಿನಾಂಕ	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದಕ್ಕೆ ಅರ್ಹತೆ ಪಡೆದ ದಿನಾಂಕ	ಷರಾ
1	2	3	4	5	6	7	8	9	10
1045 A		ಬಸವರಾಜ ಎಸ್ ಡಾಂಗೆ	ಮುಂಬಡ್ತಿ	ಸಾಮಾನ್ಯ	22-05-1973	07-07-1997	05-08-2021	05-08-2021	

ಆದ್ದರಿಂದ, ಸದರಿ ಜೇಷ್ಠತಾ ಪಟ್ಟಿಯಲ್ಲಿ ನಿಗಧಿಪಡಿಸಲಾಗಿರುವ ಜೇಷ್ಠತಾ ವಿಷಯಗಳ ಬಗ್ಗೆ ಆಕ್ಷೇಪಣೆಗಳು ಇದ್ದಲ್ಲಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ 15 (ಹದಿನೈದು) ದಿನಗಳೊಳಗಾಗಿ ಲಿಖಿತ ಮೂಲಕ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ. ನಿಗಧಿತ ಕಾಲಮಿತಿ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಗೀತಾ ಎಂ ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಸೇವೆಗಳು)

PR-1156

ಕರ್ನಾಟಕ ಸರ್ಕಾರ

ಸಂಖ್ಯೆ: ಎಫ್‌ಇಇ 93 ಎಫ್‌ಇಜಿ 2024

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 12-08-2025

ಸೇರ್ಪಡೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 93 ಎಫ್‌ಇಜಿ 2024, ದಿನಾಂಕ: 03-04-2025 ರಲ್ಲಿ ಶ್ರೀ ಆರ್ ಸಂತೋಷ್ ನಾಯ್ಕ ಮತ್ತು ಶ್ರೀ ಪರಮೇಶ್ ಕೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಇವರಿಗೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದಲ್ಲಿ ಅರ್ಹತಾ ದಿನಾಂಕವನ್ನು ಶ್ರೀ ಶಿವಶರಣ ದೊಡ್ಡಪ್ಪ ಇವರ ನಂತರದ 10-03-2017 ಕ್ಕೆ ನಿಗದಿಪಡಿಸಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ಜೇಷ್ಠತೆಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 179 ಎಫ್‌ಇಜಿ 2022, ದಿನಾಂಕ: 25-07-2024 ರಲ್ಲಿ ಶ್ರೀ ಶಿವಶರಣ ದೊಡ್ಡಪ್ಪ ಇವರ ನಂತರದ 62 A ಮತ್ತು 62 B ರಲ್ಲಿ ಜೇಷ್ಠತೆಯನ್ನು ನಿಗಧಿಪಡಿಸಿ ಆದೇಶಿಸಲಾಗಿರುತ್ತದೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 22 ಎಫ್‌ಇಜಿ 2025, ದಿನಾಂಕ: 25-02-2025 ರಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸುವ ಬಗ್ಗೆ ಪರಿಶೀಲನೆಯಲ್ಲಿದೆ.

ಆದ್ದರಿಂದ ಶ್ರೀ ಆರ್ ಸಂತೋಷ್ ನಾಯ್ಕ ಮತ್ತು ಶ್ರೀ ಪರಮೇಶ್ ಕೆ, ಇವರುಗಳ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದದ ಜೇಷ್ಠತೆಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ 22 ಎಫ್‌ಇಜಿ 2025, ದಿನಾಂಕ: 25-02-2025 ರಲ್ಲಿ ಶ್ರೀ ಶಿವಶರಣ ದೊಡ್ಡಪ್ಪ (ಜೇ.ಕ್ರ.ಸಂ. 855) ಇವರ ನಂತರ ಈ ಕೆಳಕಂಡಂತೆ ನಿಗಧಿಪಡಿಸಲಾಗಿರುತ್ತದೆ.

ಕ್ರ. ಸಂ.	ಹಳೆಯ ಜ್ಯೇಷ್ಠತಾ ಕ್ರ.ಸಂ.	ಹೆಸರು (ಶ್ರೀ/ಶ್ರೀಮತಿ)	ನೇಮಕಾತಿಯ ವಿಧಾನ (ನೇರ ನೇಮಕಾತಿ/ಮುಂಬಡ್ತಿ)	ಮೀಸಲಾತಿ ವರ್ಗ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ನೈಜವಾಗಿ ಮುಂಬಡ್ತಿ/ ನೇರ ನೇಮಕಾತಿ ನೇಮಕಾತಿ ಹೊಂದಿದ ದಿನಾಂಕ	ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ವೃಂದಕ್ಕೆ ಅರ್ಹತೆ ಪಡೆದ ದಿನಾಂಕ	ಷರಾ
1	2	3	4	5	6	7	8	9	10
855 A		ಆರ್ ಸಂತೋಷ್ ನಾಯ್ಕ	ಮುಂಬಡ್ತಿ	ಎಸ್‌ಸಿ	04-06-1978	05-10-2006	19-03-2021	10-03-2017	
855 B		ಪರಮೇಶ ಕೆ	ಮುಂಬಡ್ತಿ	ಎಸ್‌ಸಿ	01-05-1978	05-10-2006	19-03-2021	10-03-2017	

ಆದ್ದರಿಂದ, ಸದರಿ ಜೇಷ್ಠತಾ ಪಟ್ಟಿಯಲ್ಲಿ ನಿಗಧಿಪಡಿಸಲಾಗಿರುವ ಜೇಷ್ಠತಾ ವಿಷಯಗಳ ಬಗ್ಗೆ ಆಕ್ಷೇಪಣೆಗಳು ಇದ್ದಲ್ಲಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ 15 (ಹದಿನೈದು) ದಿನಗಳೊಳಗಾಗಿ ಲಿಖಿತ ಮೂಲಕ ಸಲ್ಲಿಸಲು ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ. ನಿಗಧಿತ ಕಾಲಮಿತಿ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಗೀತಾ ಎಂ ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ (ಸೇವೆಗಳು)

PR-1157

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 488 ವೆಚ್ಚ-12/2025 **ಕರ್ನಾಟಕ ಸರ್ಕಾರದ ಸಚಿವಾಲಯ**

ವಿಧಾನ ಸೌಧ

ಬೆಂಗಳೂರು, ದಿನಾಂಕ:30.08.2025

ಅಧಿಸೂಚನೆ

2025-26ನೇ ಸಾಲಿಗೆ ಪರಿಶಿಷ್ಟ ಜಾತಿಯ 75 ಅಭ್ಯರ್ಥಿಗಳು ಹಾಗೂ ಪರಿಶಿಷ್ಟ ಪಂಗಡದ 25 ಅಭ್ಯರ್ಥಿಗಳು, ಒಟ್ಟಾರೆ 100 ಅಭ್ಯರ್ಥಿಗಳನ್ನು ಹಾಗೂ 2024-2025ನೇ ಸಾಲಿನಲ್ಲಿ ಈಗಾಗಲೇ ನಿಯೋಜಿಸಲಾದ 60 ಅಭ್ಯರ್ಥಿಗಳನ್ನು ಸೇರಿದಂತೆ ಒಟ್ಟಾರೆ 160 ಅಭ್ಯರ್ಥಿಗಳನ್ನು 3 ವರ್ಷಗಳ ಅವಧಿಗೆ ಸ್ವಯಂ ಉದ್ಯೋಗ ಮತ್ತು ಹೆಚ್ಚಿನ ಶಿಕ್ಷಣಕ್ಕೆ ಅವಕಾಶವಾಗುವ ಡಿಪ್ಲೋಮ ಕೋರ್ಸುಗಳಿಗೆ ನಿಯೋಜಿಸಲು NTTF ಗದಗ ಸಂಸ್ಥೆಯ ಸೇವೆಯನ್ನು ಒಟ್ಟು ರೂ.9.59 ಕೋಟಿಗಳ ವೆಚ್ಚದಲ್ಲಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸಮಾಜ ಕಲ್ಯಾಣ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಮಾಜ ಕಲ್ಯಾಣ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1158

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 541 ವೆಚ್ಚ-12/2025 **ಕರ್ನಾಟಕ ಸರ್ಕಾರದ ಸಚಿವಾಲಯ**

(ಇ-ಆಫೀಸ್ ಕಡತ) **ವಿಧಾನ ಸೌಧ,**

ಬೆಂಗಳೂರು, ದಿನಾಂಕ:29.08.2025

ತಿದ್ದುಪಡಿ

ಈ ಹಿಂದೆ ಹೊರಡಿಸಿರುವ ಅಧಿಸೂಚನೆ ಸಂ:ಆಇ 541 ವೆಚ್ಚ-12/2025, ದಿನಾಂಕ:11.06.2025 ರಲ್ಲಿನ ಒಂದನೇ

ಲಿನಲ್ಲಿ ನಮೂದಿಸಿರುವ **"ರೂ.22,00,448/- "** ಎಂಬುದನ್ನು **" ರೂ.22,60,448/- "** ಎಂಬುದಾಗಿ ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1159

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 691 ವೆಚ್ಚ-12/2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:30.08.2025

ಅಧಿಸೂಚನೆ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ (ICPS) ಯಡಿ 03 ಸಮಾಲೋಚಕರ ಸೇವೆಯನ್ನು ರೂ.12.60 ಲಕ್ಷಗಳ ವೆಚ್ಚದಲ್ಲಿ ಒಂದು ವರ್ಷದ ಅವಧಿಗೆ ನೇರವಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1160

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 788 ವೆಚ್ಚ-12/2025
(ಇ-ಆಫೀಸ್ ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:29.08.2025

ಅಧಿಸೂಚನೆ

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಇ-ತಂತ್ರಾಂಶಕ್ಕೆ ಸಂಬಂಧಿಸಿದ ವಿಷಯಗಳ ನಿರ್ವಹಣೆಗೆ ಶ್ರೀ ಮೊಹಮ್ಮದ್ ವಸೀಂ ಇವರ ಸೇವೆಯನ್ನು ಮಾಸಿಕ ರೂ.63,809/- ಗಳಂತೆ ವಾರ್ಷಿಕ ರೂ.7,65,708/-ಗಳ ಸಮಾಲೋಚನಾ ಶುಲ್ಕದೊಂದಿಗೆ ಒಂದು ವರ್ಷದ ಅವಧಿಗೆ ಸಮಾಲೋಚಕರನ್ನಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1161

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 792 ವೆಚ್ಚ-12/2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:29.08.2025

ಅಧಿಸೂಚನೆ

ಶ್ರೀ ಅಮೇಯ ಶೀಲ್‌ವಂತ್, ಇವರ ಸೇವೆಯನ್ನು ಮಾಸಿಕ ರೂ.1,00,000/-ಗಳ ಸಮಾಲೋಚನಾ ಶುಲ್ಕದೊಂದಿಗೆ ಒಂದು ವರ್ಷದ ಅವಧಿಗೆ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಆರ್ಥಿಕ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಂಗ್ರಹಣಾ ಪ್ರಾಧಿಕಾರವು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1162

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 797 ವೆಚ್ಚ-12/2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:30.08.2025

ಅಧಿಸೂಚನೆ

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ:02.09.2025 ಮತ್ತು 03.09.2025 ರಂದು ನಡೆಸಲಿರುವ ಹೈದರಾಬಾದ್-ಕರ್ನಾಟಕ ವೃಂದದ ಪದವಿ ಮಟ್ಟದ ವಿವಿಧ ಇಲಾಖೆಗಳಲ್ಲಿನ ವಿವಿಧ ಗ್ರೂಪ್ ಸಿ ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್ಸ್ ಅಳವಡಿಸಲು ECIL ಸಂಸ್ಥೆಯ ಸೇವೆಯನ್ನು ರೂ.3,81,315/-ಗಳ ವೆಚ್ಚದಲ್ಲಿ ಹಾಗೂ BEL ಸಂಸ್ಥೆಯ ಸೇವೆಯನ್ನು ರೂ.4,00,990/- ಗಳ ವೆಚ್ಚದಲ್ಲಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1163

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 803 ವೆಚ್ಚ-12/2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:30.08.2025

ಅಧಿಸೂಚನೆ

ಶ್ರೀ ಭೂಚಂದ್ರಪ್ಪ ಇವರ ಸೇವೆಯನ್ನು ಮಾಸಿಕ ರೂ.65,000/-ಗಳ ಸಮಾಲೋಚನ ಶುಲ್ಕದೊಂದಿಗೆ ದಿನಾಂಕ:11.09.2025ರಿಂದ ಒಂದು ವರ್ಷದ ಅವಧಿಗೆ ಸಮಾಲೋಚಕರಾಗಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಆರ್ಥಿಕ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಸಂಗ್ರಹಣಾ ಪ್ರಾಧಿಕಾರವು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-1164

SOUTH WESTERN RAILWAY

एक कदम स्वच्छता की ओर

PROFORMA 10-01
INDIAN RAILWAYS
PUBLIC NOTIFICATION

Notice is hereby given to all users of Railway lines and premises situated on the completed section of the under noted section of the South Western Railway, that 25 KV feeder wires will be energized on or after the date specified against the section. On and from the same date, the OHE shall be treated as **LIVE** at all times and no unauthorized person shall approach or work in the proximity of the said OHE from KGH Coaching Depot Rd No.3 Km chainage from 69/241 to 70/932.5.

Sl. No.	Section	Chainage in KM		Probable date of Energization
		From	To	
1	New proposed line of KGH Coaching Depot Rd No.3	69/241	70/932.5	25.08.2025

Place: Bengaluru
Date: 12.08.2025

Dy. Chief Electrical Engineer, Traction Distribution, Construction
South Western Railway, Bengaluru Cantonment-560046

दक्षिण पश्चिम रेलवे

एक कदम स्वच्छता की ओर

प्रपत्र १०-०१
भारतीय रेलवे
सार्वजनिक अधिसूचना

दक्षिण पश्चिम रेलवे के नीचे उल्लिखित खंड के पूर्ण हो चुके खंड पर स्थित रेलवे लाइनों और परिसरों के सभी उपयोगकर्ताओं को सूचित किया जाता है कि 25 केवी फीडर तारों को खंड के सामने निर्दिष्ट तिथि को या उसके बाद विद्युतीकृत किया जाएगा। उसी तारीख से ओएचई को हर समय सक्रिय माना जाएगा और कोई भी अनाधिकृत व्यक्ति केजीएच कोचिंग डिपो रोड नं. 3 किमी 69/241 -70/932.5 से उक्त ओएचई के निकट नहीं आएगा या काम नहीं करेगा।

क्रम संख्या	खंड	दुरी किमी		अनुमानित दिनांक विधुयुतकरण
		से	To	
1	केजीएच कोचिंग डिपो रोड नं.3 की नई प्रस्तावित लाइन	69/241	70/932.5	25.08.2025

स्थान: बेंगलुरु
दिनांक: 12.08.2025

उप मुख्य विद्युत इंजीनियर, कर्षण वितरण, निर्माण
दक्षिण पश्चिम रेलवे, बेंगलुरु छावनी-560046

SOUTH WESTERN RAILWAY

स्वच्छ भारत
एक कदम स्वच्छता की ओर

ಪ್ರೊಫಾರ್ಮಾ 10-01
ಭಾರತೀಯ ರೈಲ್ವೆ
ಸಾರ್ವಜನಿಕ ಪ್ರಕಟಣೆ

ನೈಋತ್ಯ ರೈಲ್ವೆಯ ಕೆಳಗೆ ಸೂಚಿಸಲಾದ ಪೂರ್ಣಗೊಂಡ ರೈಲ್ವೆ ಮಾರ್ಗಗಳು ಮತ್ತು ಆವರಣದ ಎಲ್ಲಾ ಬಳಕೆದಾರರಿಗೆ ಈ ಮೂಲಕ ಸೂಚನೆ ನೀಡಲಾಗಿದೆ, 25 ಕೆವಿ ಫೀಡರ್ ತಂತಿಗಳನ್ನು ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ನಂತರ ವಿದ್ಯುತ್ ಚಾಲಿತಗೊಳಿಸಲಾಗುತ್ತದೆ. ಅದೇ ದಿನಾಂಕದಂದು ಮತ್ತು ನಂತರ, ಓವರ್ ಹೆಡ್ ಟ್ರಾಕ್ಷನ್ ಅನ್ನು ಎಲ್ಲಾ ಸಮಯದಲ್ಲೂ ಲೈವ್ ಎಂದು ಪರಿಗಣಿಸಲಾಗುತ್ತದೆ ಮತ್ತು ಯಾವುದೇ ಅನಧಿಕೃತ ವ್ಯಕ್ತಿ ಕೆಜಿಹೆಚ್ ಕೋಚಿಂಗ್ ಡಿಪೋ ರಸ್ತೆ ಸಂಖ್ಯೆ 3 ಕಿಮೀ **69/241** ರಿಂದ **70/932.5** ತನಕ ಓವರ್ ಹೆಡ್ ಲೈನ್ ಸಾಮೀಪ್ಯದಲ್ಲಿ ಸಮೀಪಿಸಬಾರದು ಅಥವಾ ಕೆಲಸ ಮಾಡಬಾರದು.

Sl. No.	ವಿಭಾಗ	ಚೈನೇಜ್ (ಕಿಮೀ.)		ಶಕ್ತಿಯುತ ಗೊಳಿಸಲು ಪ್ರಸ್ತಾಪಿಸಿದ ದಿನಾಂಕ
1	ಕೆಜಿಹೆಚ್ ಕೋಚಿಂಗ್ ಡಿಪೋ ರಸ್ತೆ ಸಂಖ್ಯೆ 3 ರ ಹೊಸ ಪ್ರಸ್ತಾವಿತ ಮಾರ್ಗ	ಇಂದ	ವರೆಗೆ	25.08.2025
		69/241	70/932.5	

ಸ್ಥಳ: ಬೆಂಗಳೂರು

ದಿನಾಂಕ: **12.08.2025**

ಉಪ ಮುಖ್ಯ ಎಲೆ ಕ್ರಿಕಲ್ ಇಂಜಿನಿಯರ್, ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಶನ್ ನಿರ್ಮಾಣ, ನೈಋತ್ಯ ರೈಲ್ವೆ, ಬೆಂಗಳೂರು ದಂಡು -560046

PD-86

ಕರ್ನಾಟಕ ಸರ್ಕಾರ

ಸಂಖ್ಯೆ:ಸಿಐ 108 ಎಸ್‌ಪಿಕ್ಯೂ 2025

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:30.08.2025.

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 3(1) ರ ಅಧಿಸೂಚನೆ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ 1966ರ (ಕರ್ನಾಟಕ ಕಾಯ್ದೆ 18) ವಿಧಿ 3(1) ರಂತೆ ದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕ ಸರ್ಕಾರವು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಲಂ 2 ರಲ್ಲಿ ನಮೂದಿಸಿರುವ ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಉಣಸೂರು, ಬೇಗೂರು, ಮೈಲನಹಳ್ಳಿ, ಚಿಕ್ಕನಹಳ್ಳಿ ಗ್ರಾಮಗಳ ಸರ್ವೇ ನಂಬರ್‌ಗಳಲ್ಲಿ ಈ ಕೆಳಕಂಡ ಪಟ್ಟಿಯಲ್ಲಿನ ಕಾಲಂ 6 ರಿಂದ 9 ರಲ್ಲಿ ತೋರಿಸಿರುವ ಚೆಕ್ಕುಬಂದಿಯುಳ್ಳ ಕಾಲಂ 3 ರಿಂದ 5 ರಲ್ಲಿ ನಮೂದಿಸಿರುವ ವಿಸ್ತೀರ್ಣದ ಜಮೀನುಗಳಿಗೆ ಮೇಲ್ಕಂಡ ಕಾಯ್ದೆಯ ಅಧ್ಯಾಯ 7ರ ವಿಧಿಗಳು ಈ ಅಧಿಸೂಚನೆಯು ಪ್ರಚುರಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಘೋಷಿಸಲಾಗಿದೆ.

ಅನುಸೂಚಿ

ಗ್ರಾಮ: ಉಣಸೂರು ಹೋಬಳಿ: ಜಾಲ-3 ತಾಲ್ಲೂಕು: ಯಲಹಂಕ ಜಿಲ್ಲೆ: ಬೆಂಗಳೂರು ಜಿಲ್ಲೆ								
ಕ್ರ. ಸಂ	ಸರ್ವೇ ನಂ	ಭೂಸ್ವಾಧೀನಕ್ಕೊಳಪಟ್ಟ ವಿಸ್ತೀರ್ಣ			ಚೆಕ್ಕು ಬಂದಿ			
		ಐನ್ ಎ-ಗು	ಖರಾಬು ಎ-ಗು	ಬಾಕಿ ಎ-ಗು	ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	2	3	4	5	6	7	8	9
1	88 ರ ಪೈಕಿ	2-28½	2-28½	–	ಉಳಿಕೆ	ಗಡಿ	ಉಳಿಕೆ	ಉಳಿಕೆ
	ಒಟ್ಟು	2-28 ½	2-28 ½					

ಗ್ರಾಮ: ಮೈಲನಹಳ್ಳಿ			ಹೋಬಳಿ: ಜಾಲ-3		ತಾಲ್ಲೂಕು: ಯಲಹಂಕ		ಜಿಲ್ಲೆ: ಬೆಂಗಳೂರು ಜಿಲ್ಲೆ	
1	2	3	4	5	6	7	8	9
1.	1/2	0-31 1/4	–	0-31 1/4	1/3	2	1/1 ಉಳಿಕೆ	ಉಳಿಕೆ
2.	1/3	0-16 1/2	–	0-16 1/2	1/4	1/2	5	ಉಳಿಕೆ
3.	2/3	0-18	–	0-18	1	ಉಳಿಕೆ	ಉಳಿಕೆ	2/4
4.	2/4	0-29 1/2	–	0-29 1/2	1	110	2/3	111
5.	5	0-16	–	0-16	6	ಉಳಿಕೆ	ಉಳಿಕೆ	1
6.	6/1A	0-26	–	0-26	6/3	6/1ಬಿ	ಉಳಿಕೆ	1
7.	6/3	0-19 1/2	–	0-19 1/2	6/4	6/1ಎ	6/2	ಉಳಿಕೆ
